ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

## Monthly Magazine

ಸಂಪುಟ 10 | ಸಂಚಿಕೆ 8 | ಆಗಸ್ಟ್ 2025



ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ
ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**

# ಶತೋತ್ತರ ದಶಮಾನೋತ್ಸವ (110ನೇ ಜಯಂತಿ)

## ವಿಶೇಷ ಸಂಚಿಕೆ

"ಶ್ರದ್ಧೆಯೇ ಸಿದ್ಧಿಗೆ ಮೂಲ" ಎಂಬ ಮಹಾಮಂತ್ರವನ್ನು
ಪಠಿಸಿದ ಮಹರ್ಷಿ ನೀನಯ್ಯಾ,
ದುಡಿಮೆಯಲ್ಲಿಯೇ ದೇವರನು ಕಾಣಿಸಿದ
ಕರ್ಮಯೋಗಿ ನೀನಯ್ಯಾ,
ನಿಜದರಿವು ಅಜನಿರವು ! ಎಂದುದ್ಘೋಷಿಸಿದ
ಮಹಾಜ್ಞಾನಿ ನೀನಯ್ಯಾ,
ನಿತ್ಯದಾಸೋಹದಲಿ ಸತ್ಯ ಶ್ರೀಗಂಧವಾಗಿ ಸವೆದುಕೊಂಡ
ತ್ರಿವಿಧದಾಸೋಹಿ ನೀನಯ್ಯಾ,
ಎನ್ನೆದೆಯ ಧರೆಯಲ್ಲಿ ಕಪ್ಪುರದ ಖಂಡವಾಗಿ ಬೆಳಗಿದ
ಚಿಜ್ಜ್ಯೋತಿ ನೀನಯ್ಯಾ,
ಎನ್ನ ಗುರು ಶಿವರಾತ್ರಿ ರಾಜೇಂದ್ರ ಮಹಾಪ್ರಭುವೆ
ನೀನಿತ್ತ ಬೆಳಕಿಗೆ ನಾನೇನನೀವೆನಯ್ಯಾ!

– ಡಾ. ಸಾ.ಶಿ. ಮರುಳಯ್ಯ

## ವಿವಿಧ ಮಠದ ಶ್ರೀಗಳೊಂದಿಗೆ ಪರಮಪೂಜ್ಯ ರಾಜೇಂದ್ರ ಶ್ರೀಗಳು



ಸಿದ್ಧಗಂಗಾ ಮಠದ
ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು



ಸಿರಿಗೆರೆ, ಮೂರುಸಾವಿರ ಮಠ
ಪರಕಾಲ ಮಠ ಮತ್ತು
ಆದಿಚುಂಚನಗಿರಿ ಶ್ರೀಗಳು



ಡಾ. ಜಚನಿಯವರು



ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳು
ಪೇಜಾವರ ಮಠದ ಶ್ರೀಪಾದಂಗಳು
ಮತ್ತು ಪರಕಾಲ ಮಠದ ಶ್ರೀಗಳವರು

# ಧರ್ಮವೇ ಶ್ರೀರಕ್ಷೆ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು



"ಧರ್ಮವು ತನ್ನನ್ನು ರಕ್ಷಿಸಿದವರನ್ನು ತಾನು ರಕ್ಷಿಸುತ್ತದೆ" ಎನ್ನುವುದು ಭಾರತ ಸಂಸ್ಕೃತಿಯ ದಿವ್ಯಸಂದೇಶ. ಈ ಸಂದೇಶ ಭಾರತದ ಉದ್ದಗಲಕ್ಕೂ ನಾಣ್ಣುಡಿಯಾಗಿ ಜನಜೀವನದಲ್ಲಿ ಹಾಸುಹೊಕ್ಕಾಗಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. 'ಧರ್ಮ' ಶಬ್ದವನ್ನು ಕೇಳದ ಭಾರತೀಯನಿಲ್ಲ. ಯಾರಾದರೊಬ್ಬರು ಮಾಡುವ ಕಾರ್ಯ ಬಹುಜನರ ದೃಷ್ಟಿಯಲ್ಲಿ ಮಾಡಬಾರದ ಕಾರ್ಯವೆನಿಸಿದರೆ ಅಂತಹ ಕಾರ್ಯವನ್ನು ಧರ್ಮವಲ್ಲ, ಅಧರ್ಮ ಎನ್ನುತ್ತಾರೆ. ಒಬ್ಬನು ಮತ್ತೊಬ್ಬನಿಗೆ ಕಷ್ಟದಲ್ಲಿದ್ದಾಗ ಸಹಾಯ ಮಾಡಿದರೆ ಅದು ಧರ್ಮಕಾರ್ಯವೆನ್ನುತ್ತೇವೆ. ಹತ್ತಾರು ಜನರ ಸುಖಕ್ಕೆ, ಕಷ್ಟಕಾರ್ಪಣ್ಯಗಳ ಹರಣಕ್ಕೆ, ಆತ್ಮೋದ್ಧಾರಕ್ಕೆ ಕಾರಣವಾಗುವ ಯಾವ ಕೆಲಸವನ್ನು ಮಾಡಿದರೂ ಅದು ಧರ್ಮಕಾರ್ಯ ಎನ್ನುತ್ತೇವೆ. ಹೀಗೆ ಧರ್ಮ ಸಾಮಾನ್ಯ ಅರ್ಥದಲ್ಲಿ ಜನಜೀವನವನ್ನೇ ಲೇಪಿಸಿಕೊಂಡಿರುವುದು ನಮ್ಮೆಲ್ಲರ ಸಾಮಾನ್ಯ ಅನುಭವ.

ಆದಾಗ್ಯೂ ಧರ್ಮ ವಿಪುಲ ಅರ್ಥದಲ್ಲಿ ವ್ಯಾಪಕಗೊಂಡಿದೆ.

'ಧ್ರಿಯತೇ ಲೋಕೋ ಅನೇನ ಧರತಿ ಲೋಕಂ ವಾ ಇತಿ ಧರ್ಮ' ಎಂದಿದೆ. ಅಂದರೆ ಲೋಕವು ಯಾವುದರಿಂದ ಒಂದೆಡೆ ಹಿಡಿಯಲ್ಪಟ್ಟಿದೆಯೋ ಅದು ಧರ್ಮ ಎಂದು ಶ್ರುತಿಗಳಲ್ಲಿ ಹೇಳಿದೆ. ಸೃಷ್ಟಿಯ ಚರಾಚರಗಳಲ್ಲೆಲ್ಲಾ ವೈವಿಧ್ಯತೆ ಮತ್ತು ಭಿನ್ನತೆ ಕಂಡುಬರುತ್ತದೆ. ಭಿನ್ನ ಗುಣಧರ್ಮದ ಪ್ರಾಣಿಗಳು ಈ ಸೃಷ್ಟಿಯಲ್ಲಿವೆ. ಕೆಲವೊಂದು ವರ್ಗದ ಪ್ರಾಣಿಗಳಿಗೆ ಸಸ್ಯಗಳೇ ಆಹಾರವಾದರೆ ಮತ್ತೆ ಕೆಲವಕ್ಕೆ ಜೀವಂತ ಪ್ರಾಣಿಗಳೇ ಆಹಾರ. ಒಂದು ಪ್ರಾಣಿಯನ್ನು ತಿಂದೇ ಮತ್ತೊಂದು ಪ್ರಾಣಿ ಬದುಕಬೇಕು. ಇನ್ನೊಂದು ಜೀವಕ್ಕೆ ಹಿಂಸೆ ಕೊಡುವುದೇ ಕೆಲವೊಂದು ಪ್ರಾಣಿಗಳಲ್ಲಿರುವ ವೈಶಿಷ್ಟ್ಯ (ಹಾವು, ಚೇಳು ಮುಂತಾದವು). ಒಂದು ಪ್ರಾಣಿಯ ಆಶ್ರಯದಿಂದಲೇ ಮತ್ತೊಂದು ಪ್ರಾಣಿ ಬದುಕಬೇಕು. ಇವೆಲ್ಲವೂ ಇರುವುದು ಈ ಸೃಷ್ಟಿಯಲ್ಲಿ. ಬೆಂಕಿ ಸುಡುತ್ತದೆ, ನೀರು ಸುಡುವುದನ್ನು ಆರಿಸುತ್ತದೆ. ಆದರೆ ಆರಿಸುವ ನೀರಿನಲ್ಲೇ ಬೆಂಕಿಯಿದೆ. ಇಷ್ಟೊಂದು ವಿಪರ್ಯಾಸವಿದ್ದರೂ ಇವೆಲ್ಲ ಇರುವುದು ಇಲ್ಲಿಯೇ. ಇವೆಲ್ಲವೂ ಒಂದೆಡೆ ಇರುವಂತೆ ಮಾಡಿದ ಒಂದು ಸೂತ್ರವಿರಲೇಬೇಕು. ಆ ಸೂತ್ರವನ್ನೇ ಶಾಸ್ತ್ರಗಳಲ್ಲಿ ಏಕತ್ವ, ದೇವರು, ಪರವಸ್ತು, ಧರ್ಮ ಎಂದೆಲ್ಲ ಕರೆಯಲಾಗಿದೆ. ಹೀಗೆ ಎಲ್ಲವನ್ನೂ ಇರಗೊಡುವ ಸೂತ್ರವೊಂದಿಲ್ಲದಿದ್ದರೆ ನೀರೇ ಅಧಿಕವಾಗಿ ಬೆಂಕಿಯಿಲ್ಲದಂತಾಗುತ್ತಿತ್ತು. ಬಲಶಾಲಿಯಾದ ಪ್ರಾಣಿ ದುರ್ಬಲವಾದುದನ್ನು ತಿಂದು ಮುಗಿಸಿಬಿಡುತ್ತಿತ್ತು. ಆದರೆ ಹಾಗಾಗದೆ ಜಗತ್ತು ಅವೆಲ್ಲವನ್ನು ಹೊಂದಿ ಮುನ್ನಡೆಯುತ್ತಲೇ ಇದೆ. ಇದನ್ನು ಪರ್ಯಾಲೋಚಿಸಿದಾಗ ಧರ್ಮ ಶಬ್ದದ ವ್ಯಾಖ್ಯಾನ ಅಷ್ಟು ಸುಲಭವೂ ನಗಣ್ಯವೂ ಆಗಿಲ್ಲ.

ಜನರೆಲ್ಲರೂ ಜೀವನದಲ್ಲಿ ಧರ್ಮವನ್ನು ಅರಿಯುವಂತಹ ಅರ್ಥವನ್ನು ಕಲ್ಪಿಸಲು ಶ್ರುತಿಕಾರರು ಪ್ರಯತ್ನಿಸಿದ್ದಾರೆ. 'ಯಥೋ ಅಭ್ಯುದಯೋ ನಿಃಶ್ರೇಯಸಸ್ಸಿದ್ಧಿಃ ಸ ಧರ್ಮಃ'. ಅಂದರೆ ಯಾವುದರಿಂದ ಅಭ್ಯುದಯ ಮತ್ತು ಶ್ರೇಯಸ್ಸುಗಳ ಸಿದ್ಧಿಯಾಗುವುದೋ

---

ಸಿದ್ಧಗಂಗಾ ಶ್ರೀಕ್ಷೇತ್ರದಲ್ಲಿ ನೀಡಿದ ಸಂದೇಶ

ಅದು ಧರ್ಮ ಎಂದಿದ್ದಾರೆ. ಧರ್ಮ ಮಾನವರ ಅಭ್ಯುದಯವನ್ನು, ಶ್ರೇಯಸ್ಸನ್ನು ಸಂಪಾದಿಸುವ ಸಾಧನವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಧರ್ಮ ಪ್ರಗತಿ ವಿರೋಧಿ ಎಂಬ ಭಾವನೆ ಇತ್ತೀಚೆಗೆ ಬಹು ಜನರಲ್ಲಿ ಬೆಳೆದು ಬಂದಿದೆ. ಈ ಭಾವನೆಯನ್ನೇ ಬಂಡವಾಳವಾಗಿ ಮಾಡಿಕೊಂಡು ಹೊಸ ವಿಚಾರಧಾರೆಗಳು ಜಗತ್ತಿನಲ್ಲಿ ಪ್ರವಹಿಸುತ್ತಿವೆ. ಧರ್ಮ ಐಹಿಕ ಜೀವನದ ಪ್ರಗತಿಗೆ ಅಡ್ಡಿಯಾಗಿದೆಯೆಂದೂ ಆದುದರಿಂದ ಧರ್ಮವನ್ನು ಅಳಿಸಿ ಮುನ್ನಡೆಯಬೇಕೆಂದೂ ಹೇಳುವ ವಿಚಾರಸರಣಿ ಜಗತ್ತಿನಲ್ಲಿ ಮೂಡಿದೆ. ಈ ವಿಚಾರದ ಆಧಾರದ ಮೇಲೆ ರಷ್ಯಾ, ಚೀನಾದಂತಹ ಸಾಮ್ರಾಜ್ಯಗಳು ತಲೆಯೆತ್ತಿವೆ. ಆದರೆ ಈ ವಿಚಾರ ಭಾರತಕ್ಕೆ ಹೊಸತಲ್ಲ. ಶತಶತಮಾನಗಳ ಹಿಂದೆಯೇ ಲೋಕಾಯತರು ಇಲ್ಲಿ ಉದ್ಭವಿಸಿದರು.

ಋಣಂ ಕೃತ್ವಾ ಘೃತಂ ಪಿಬೇತ್ ಯಾವಜ್ಜೀವೇತ್ ಸುಖಾಜ್ಜೀವೇತ್
ಭಸ್ಮೀಭೂತಸ್ಯ ದೇಹಸ್ಯ ಕುತಃ ಪುನರಾಗಮನಂ

ಅಂದರೆ ಬದುಕಿರುವವರೆಗೆ ಸುಖವಾಗಿರಬೇಕು. ಅದಕ್ಕಾಗಿ ಸಾಲ ಮಾಡಿಯಾದರೂ ತುಪ್ಪ ಕುಡಿಯಬೇಕು. ಬೆಂಕಿಯಲ್ಲಿ ಸುಟ್ಟುಹೋಗುವ ದೇಹ ಮತ್ತೆ ಬರುವುದೆಲ್ಲಿ? ಎಂದೆಲ್ಲ ವಾದಿಸಿದರು. ಆದರೆ ಅವರ ಅಂತಹ ಸಿದ್ಧಾಂತಗಳೆಲ್ಲಾ ಮಣ್ಣುಪಾಲಾದವು. ಲೋಕಾಯತರು ಕಾಲಗರ್ಭದಲ್ಲಿ ಮರೆಯಾಗಿ ಹೋದರು. ಜಗತ್ತಿನ ಇತಿಹಾಸದಲ್ಲಿ ಇಂತಹ ಅನೇಕ ನಿದರ್ಶನಗಳು ದೊರೆಯುತ್ತವೆ. ಆದುದರಿಂದ ಧರ್ಮ ಐಹಿಕ ಜೀವನಪ್ರಗತಿಯ ವಿರೋಧಿಯಲ್ಲ, ಐಹಿಕ ಅಭ್ಯುದಯವಾಗಬೇಕು. ಆದರೆ ಅದು ಪಾರಮಾರ್ಥಿಕ ಶ್ರೇಯಸ್ಸಿಗೆ ನೆರವಾಗುವಂತಿರಬೇಕು. ಪಾರಮಾರ್ಥಿಕ ಶ್ರೇಯಸ್ಸಿಗೆ ನೆರವಾಗದ ಐಹಿಕ ಅಭ್ಯುದಯ ನಿರರ್ಥಕ. ಐಹಿಕ ಅಭ್ಯುದಯವಿಲ್ಲದೆ ಪಾರಮಾರ್ಥಿಕ ಶ್ರೇಯಸ್ಸು ಕೇವಲ ಕಾಲ್ಪನಿಕ.

ಆದರೆ ಇಂದು ಧರ್ಮ ಚಲಾವಣೆಯಿಲ್ಲದ ನಾಣ್ಯದಂತೆ ಭಾಸವಾಗುತ್ತಿದೆ. ಇದಕ್ಕೆ ಕಾರಣವೇನು? ಧರ್ಮದಲ್ಲಿ ಏನಾದರೂ ದೋಷವಿದೆಯೆ? ಹೀಗೆ ವಿಚಾರ ಮಾಡಿದರೆ ಹಿಂದೆ ಹೇಳಿದಂತೆ ಅಭ್ಯುದಯಕ್ಕೂ ಶ್ರೇಯಸ್ಸಿಗೂ ಕಾರಣವಾದ ಧರ್ಮ ಹೀಗೇಕೆ ಪರಿಗಣಿಸಲ್ಪಡುತ್ತಿದೆ? ಎಂಬ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ನಮ್ಮ ದೃಷ್ಟಿಯಲ್ಲಿ ಧರ್ಮದಲ್ಲಿ ದೋಷವಿಲ್ಲ. ಆದರೆ ಧರ್ಮವನ್ನು ಅರ್ಥೈಸುವುದರಲ್ಲಿ ಮತ್ತು ಅದನ್ನು ಬಳಸಿಕೊಳ್ಳುವುದರಲ್ಲಿ ದೋಷವಿರುವುದು ಖಚಿತವಾಗುತ್ತದೆ. ವ್ಯಾವಹಾರಿಕ ದೃಷ್ಟಿಯಲ್ಲಿ ಅನುಸರಿಸುತ್ತಿರುವ ಎಲ್ಲ ಕಾರ್ಯಕ್ಕೂ ಧರ್ಮವೆಂದೇ ವ್ಯಾಖ್ಯಾನ ಮಾಡುವ ಪದ್ಧತಿ ಬೆಳೆದು ಬಂದಿತು. ಅಂದಂದಿನ ಕಾಲಕ್ಕೆ ಹೊಂದಿಕೊಂಡ ಆಚರಣೆಗಳನ್ನೆಲ್ಲಾ ಸಾರ್ವತ್ರಿಕವೆಂದು ವಾದಿಸುವ ಮನೋಭಾವ ನಮ್ಮಲ್ಲಿ ಬೆಳೆದುಬಂದಿತು. ದಾರಿ ತೋರಿದ ದಾರ್ಶನಿಕರ ಇಂಗಿತವನ್ನು ಅರ್ಥ ಮಾಡಿಕೊಳ್ಳದೆ ಅಂದಿನ ಪ್ರಸಂಗಕ್ಕೆ ಅನುಸರಿಸಿ ತೋರಿದ ಆಚರಣೆಗಳು, ಅನುಷ್ಠಾನಗಳು, ಲಾಂಛನಗಳು ಧರ್ಮದ ಸ್ವರೂಪಗಳಾಗಿ ಉಳಿದು ಬಂದವು. ಹೀಗೆ ಬಾಹ್ಯ ಸಂಗತಿಗಳನ್ನೇ ಧರ್ಮವೆಂದು ವಿಚಾರಶೂನ್ಯ ಜನರು ನಂಬಿದರು. ಅದನ್ನೇ ಬೆಂಬಲಿಸಿದರು. ಆಚರಣೆಗಳು, ಲಾಂಛನಗಳು ಬಾಹ್ಯ ವಿಚಾರಗಳು ಎಂದಿಗೂ ನಿತ್ಯ ನೂತನವಾಗಲಾರವು. ಪ್ರಕೃತಿ ಒಂದೇ ರೀತಿಯ ಆಚರಣೆಯನ್ನು, ಅನುಸಂಧಾನವನ್ನು, ವಿಚಾರಧಾರೆಯನ್ನು ಅಂತಿಮವೆಂದು ಎಂದೂ ಒಪ್ಪಿಕೊಂಡಿಲ್ಲ. ಆದುದರಿಂದ ಬಾಹ್ಯ ಆಚರಣೆಗಳು, ಲಾಂಛನಗಳು, ವ್ಯವಸ್ಥೆಗಳಷ್ಟೇ ಧರ್ಮವೆನಿಸುವುದಿಲ್ಲ. ಧರ್ಮದ ಅಂತರಾರ್ಥವನ್ನು ಅರಿಯದವರು ಬಾಹ್ಯಾಚರಣೆಗಳನ್ನೇ ಧರ್ಮವೆಂದು ಪ್ರತಿಪಾದಿಸಿದ ಕಾರಣ ಧರ್ಮ ತನ್ನ ಸತ್ವವನ್ನು ಕಳೆದುಕೊಳ್ಳುತ್ತಾ ಬಂದಿದೆ. ಎರಡನೆಯದಾಗಿ ಸ್ವಾರ್ಥಕ್ಕಾಗಿ ಧರ್ಮವನ್ನು ಬಳಸಿಕೊಂಡು ಪರಸ್ಪರ ಕಲಹವನ್ನುಂಟು ಮಾಡಿದ ಜನಸಮುದಾಯವೂ ಧರ್ಮದ ಅಪಾರ್ಥಕ್ಕೆ

ಕಾರಣವಾಗಿದೆ. ಇಂತಹ ಕ್ಷುಲ್ಲಕ ವಿವರಣೆಗಳನ್ನು ಮೀರಿ ಮೌಲ್ಯಾಧಾರಿತ ವಿಚಾರಧಾರೆಯನ್ನುಳ್ಳ ಧರ್ಮದ ಅರಿವು ಆಚರಣೆಗಳನ್ನು ಮೂಡಿಸಬೇಕಾಗಿದೆ. ಅಂದರೆ ಅಂತಹ ಧರ್ಮ ಯಾವುದು?

ವೇದ ಸ್ಮೃತಿ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ |
ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಂ ||

ಎಂದು ಶ್ರುತಿ ಸಾರಿದೆ.

ವೇದ ಅಂದರೆ ಜ್ಞಾನ, ಸ್ಮೃತಿ ಅಂದರೆ ಪರಂಪರಾಗತವಾಗಿ ಬಂದ ಮಹಾನುಭಾವರ ಸಂದೇಶಗಳು, ಒಳ್ಳೆಯ ಆಚಾರಗಳು ಮತ್ತು ಆತ್ಮನಿಗೆ ಪ್ರಿಯವಾದ ವಿಚಾರ ಇವನ್ನು ಧರ್ಮದ ನಾಲ್ಕು ಲಕ್ಷಣಗಳೆಂದಿದೆ. ಅರಿವು ಅಂದರೆ ಕೇವಲ ಬಾಹ್ಯವಸ್ತುವಿನ ಜ್ಞಾನವಲ್ಲ. ಅಂತರಾತ್ಮನ ಇರವಿನ ಅರಿವು ಯಾರಿಗೆ ಬೇಡ! ನುಡಿದು ನಡೆದು ಅನುಭವಿಸಿ ತಾವು ಕಂಡ ಸತ್ಯವನ್ನು ಜಗತ್ತಿಗೆ ನೀಡಿದ ಮಹಾನುಭಾವರ ದಿವ್ಯಸಂದೇಶಗಳಿಂದ ಲೋಕೋದ್ಧಾರವಾಗುವುದಿಲ್ಲವೆ? ಅಂತೆಯೇ ಇನ್ನೊಬ್ಬರಿಗೆ ಅನ್ಯಾಯವಾಗದ ಆದರೆ ಮತ್ತೊಬ್ಬರಿಂದಲೂ ಅನುಕರಣೀಯವೂ ಅವರ ಉದ್ಧಾರಾತ್ಮಕವೂ ಆದ ಆಚಾರಗಳು, ಆತ್ಮೋದ್ಧಾರದ ವಿಚಾರಗಳ ಅವಲಂಬನದಿಂದ ಯಾರಿಗೂ ನಷ್ಟವಾಗಲಿ ಕಷ್ಟವಾಗಲಿ ಸಂಭವಿಸುವುದಿಲ್ಲ. ಆದುದರಿಂದ ಇದೇ ಅರ್ಥವನ್ನೇ ಶಾಸ್ತ್ರಗಳು ಮತ್ತೆ ಮತ್ತೆ ಪ್ರತಿಪಾದಿಸುತ್ತ ಬಂದಿವೆ.

ವೇದೋಖಿಲಾ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಂ |
ಆಚಾರಶ್ಚೈವ ಸಾಧೂನಾಂ ಆತ್ಮನೋ ಸೃಷ್ಟಿರೇವ ಚ ||

ಅಂದರೆ ವೇದ, ಸ್ಮೃತಿ, ಸಾಧುಜನರ ಆಚಾರ, ಆತ್ಮನ ಸಂತುಷ್ಟಿ ಇವು ನಾಲ್ಕು ಧರ್ಮದ ಮೂಲಗಳು.

ಆಗಮಗಳ ಕಾಲಕ್ಕೆ, ಪುರಾಣಗಳ ಕಾಲಕ್ಕೆ ಧರ್ಮದ ವ್ಯಾಖ್ಯೆ ಮತ್ತಷ್ಟು ವಿಶಾಲವಾಗಿದೆ. ಪಾರಮೇಶ್ವರಾಗಮದಲ್ಲಿ

ಶ್ರದ್ಧಾಶಮದಮಶ್ಚ ಅಹಿಂಸಾ ಸತ್ಯ
ಮಾರ್ಜವಂ |
ತ್ಯಾಗಂ ದಾನೋದಾಯಾಚೇತಿ ದಶಕಂ
ಧರ್ಮಲಕ್ಷಣಂ ||

ಎಂದಿದೆ. ಅಂದರೆ ಶ್ರದ್ಧೆ, ಶಮೆ, ಶುಚಿ, ಅಹಿಂಸೆ, ಸತ್ಯ, ಆರ್ಜವ, ತ್ಯಾಗ, ದಾನ, ದಯೆ ಇವು ಧರ್ಮದ ಹತ್ತು ಲಕ್ಷಣಗಳು ಎಂದು ಅರ್ಥೈಸಿದೆ. ಈ ಹತ್ತು ತತ್ವಗಳ ಅನುಸಂಧಾನದಿಂದ ಮಾನವನ ಪ್ರಗತಿಗೆ ಕುಂದು ಬರಲಾರದಷ್ಟೆ? ಭಾರತ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧೀಜಿಯವರು ಇದೇ ವಿಚಾರಗಳನ್ನು ತಮ್ಮ ಜೀವನದಲ್ಲಿ ಅನುಸಂಧಾನ ಮಾಡಿದರು.

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹಃ |
ಶರೀರ ಶ್ರಮ ಅಸ್ವಾದ ಸರ್ವತ್ರ ಭಯವರ್ಜನ ||
ಸರ್ವಧರ್ಮೀ ಸಮಾನತ್ವ ಸ್ವದೇಶೀ ಸ್ವಾರ್ಥಭಾವತಾ |
ಹೀ ಏಕಾದಶಸೇವಾನೀ ನಮ್ರತ್ವೇ ವ್ರತನಿಶ್ಚಯೇ ||

ಎಂದು ಹನ್ನೊಂದು ಆಚರಣೆಗಳನ್ನು ವ್ರತವಾಗಿ ಸ್ವೀಕರಿಸಿದ್ದರು. ಈ ತತ್ವಗಳು ಶಾಸ್ತ್ರೋಕ್ತವಾದ ಧರ್ಮದ ಲಕ್ಷಣಗಳಿಗೆ ಭಿನ್ನವಾಗುವುದಿಲ್ಲ. ಅಂದ ಮೇಲೆ ಇಂತಹ ಧರ್ಮದ ಆಚರಣೆ, ಅವಲಂಬನೆ ಮಾನವನ ಐಹಿಕ ಪ್ರಗತಿಗಾಗಲಿ ಆಂತರಿಕ ಅಭ್ಯುದಯಕ್ಕಾಗಲಿ ಎಂದೂ ಕುಂದು ತರಲಾರದೆಂಬುದು ವಿದಿತವಾಗುತ್ತದೆ. ಧರ್ಮದ ವ್ಯಾಖ್ಯೆಯನ್ನು ಮತ್ತಷ್ಟು ಸುಲಭಗೊಳಿಸಿದವರು ವಿಶ್ವವಿಭೂತಿ ಬಸವಣ್ಣನವರು.

ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ

ಎಂದಿದ್ದಾರೆ.

ಬಸವಣ್ಣನವರು ಬಳಸಿದ 'ದಯೆ' ಶಬ್ದ ಅತ್ಯಂತ ಮಹತ್ವಪೂರ್ಣವಾದುದು. ದಯೆ ಕೇವಲ ಅಂತಃಕರಣ ಅನುಕಂಪವನ್ನಷ್ಟೇ ಪ್ರತಿಧ್ವನಿಸುವುದಿಲ್ಲ. ದಯೆ ಕ್ರಿಯಾತ್ಮಕವಾಗಬೇಕು. ಪತಿತರನ್ನು ಮೇಲೆತ್ತಲು

ಪ್ರತಿಯೊಬ್ಬರೂ ಪ್ರಯತ್ನಿಸಬೇಕು. ಅದಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಿರಬೇಕು. ಹೀಗೆ ವ್ಯಾಪಕವಾದ ಅರ್ಥದಲ್ಲಿ ದಯೆ ಧರ್ಮದ ಮೂಲಸ್ವರೂಪವಾಗಿ ಉಲ್ಲೇಖಿಸಲ್ಪಟ್ಟಿದೆ.

ಇಂತಹ ಧರ್ಮವನ್ನು ಯಾರು ರಕ್ಷಿಸುವರೋ ಅವರನ್ನು ಧರ್ಮವೇ ರಕ್ಷಿಸುವುದೆಂದು ಶ್ರುತಿವಾಕ್ಯವಿದೆ. ಧರ್ಮವನ್ನು ರಕ್ಷಿಸುವುದು ಎನ್ನುವಲ್ಲಿ ರಕ್ಷಕನು ಧರ್ಮದಿಂದ ನಡೆಯಬೇಕು. ಅಂದರೆ ಹಿಂದೆ ಹೇಳಿದ ಧರ್ಮದ ಎಲ್ಲ ಲಕ್ಷಣಗಳೂ ಮಾನವನ ಆಚರಣೆಯಲ್ಲಿ ಅಳವಟ್ಟಿರಬೇಕಾಗುತ್ತದೆ. ಅದರಂತೆ ಪ್ರತಿಯೊಬ್ಬ ವ್ಯಕ್ತಿಯೂ ಧರ್ಮ ಜೀವನವನ್ನು ನಡೆಸಿದರೆ ಅವರ ಬಾಳಿನಲ್ಲಿ ಬಾಹ್ಯದ ಅಭ್ಯುದಯವೂ, ಆಂತರಿಕ ಸಿದ್ಧಿಯೂ ಲಭ್ಯವಾಗುವುದು ಸುಲಭಸಾಧ್ಯ. ಧರ್ಮವನ್ನು ರಕ್ಷಿಸುವುದು ಎಂಬುದರ ಮತ್ತೊಂದು ಅರ್ಥ ತಾನು ಮಾತ್ರ ಧರ್ಮಾನುಯಾಯಿಯಾಗುವುದಲ್ಲ. ಧರ್ಮದಲ್ಲಿ ನಿರಾಸಕ್ತನಾದವನಲ್ಲಿ ಧರ್ಮಾಸಕ್ತಿಯನ್ನು ಬೆಳೆಸುವುದು ಮತ್ತು ಪತಿತನಾಗುತ್ತಿದ್ದವನನ್ನು ಸರ್ವ ರೀತಿಯಿಂದಲೂ ಮೇಲೆತ್ತುವುದು ಧರ್ಮರಕ್ಷಣೆಯ ಮತ್ತೊಂದು ಮುಖ. ಹೀಗೆ ಧರ್ಮರಕ್ಷಣೆಗೆ ಶ್ರಮಿಸಿದ ವ್ಯಕ್ತಿಯು ಧರ್ಮದಿಂದ ರಕ್ಷಿಸಲ್ಪಡುತ್ತಾನೆ. ಅಂತೆಯೇ "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಶ್ರುತಿವಾಕ್ಯದಲ್ಲಿ ವ್ಯಕ್ತಿಯು ತಾನು ಧರ್ಮಾನುಯಾಯಿಯಾಗಿರಬೇಕೆಂಬುದನ್ನು, ನೆರೆಹೊರೆಯವರನ್ನು ಧರ್ಮದಲ್ಲಿ ನಡೆಯುವಂತೆ ಮಾಡಬೇಕೆಂಬುದನ್ನು ಸೂಚಿಸುತ್ತದೆ.

ನಾವು ಇಂದು ಪವಿತ್ರವಾದಂತಹ ಒಂದು ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ಪಾವನಕ್ಷೇತ್ರವಾದ ಸಿದ್ಧಗಂಗಾ ಕ್ಷೇತ್ರವು ಧರ್ಮದಿಂದ ನಡೆದು ಭಕ್ತರನ್ನು ಧರ್ಮದಿಂದ ನಡೆಸಿ ಧರ್ಮವನ್ನು ಸಂರಕ್ಷಿಸಿದ ಮಹಾನುಭಾವರು ತಪಗೈದ ಪುಣ್ಯಭೂಮಿ. ಇಂತಹ ಪುಣ್ಯಕ್ಷೇತ್ರದ ಅಧಿಪತಿಗಳಾಗಿ ಪರಮಪೂಜ್ಯ ನಿರಂಜನಪ್ರಣವಸ್ವರೂಪಿಗಳಾದ ಡಾ. ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ಜೀವನದ 50 ವರ್ಷಗಳ ನಿಷ್ಠೆಯಿಂದ ಧರ್ಮಜೀವನವನ್ನು ನಡೆಸಿ ಧಾರ್ಮಿಕ ತಪಸ್ಸಿನಲ್ಲಿ ಸಿದ್ಧಿ ಪಡೆದು ಲಕ್ಷಾಂತರ ಭಕ್ತರನ್ನು ಉದ್ಧರಿಸಿ ಧರ್ಮದೀಪ್ತಿಯನ್ನು ಕನ್ನಡನಾಡಿನಲ್ಲಿ ಬೆಳಗಿದ್ದಾರೆ. ಹೀಗೆ ಐವತ್ತು ವರ್ಷ ಕಾಲ ಅವರು ನಡೆಸಿದ ಧರ್ಮರಕ್ಷಣೆಯು ಅವರನ್ನು ಅನೇಕ ಎಡರುತೊಡರುಗಳಲ್ಲಿಯೂ ಕೂಡ ಸಂರಕ್ಷಿಸಿಕೊಂಡು ಬಂದು ಧರ್ಮದೀವಿಗೆಯು ಮತ್ತೆ ಮತ್ತೆ ಪ್ರಜ್ವಲಿಸುವಂತೆ ಮಾಡಿರುವುದು ನಮ್ಮೆಲ್ಲರ ಅನುಭವದ ಸಂಗತಿಯಾಗಿದೆ. ಆದುದರಿಂದ ಶ್ರೀ ಸಿದ್ಧಗಂಗಾ ಕ್ಷೇತ್ರದ ಇತಿಹಾಸವೇ "ಧರ್ಮೋ ರಕ್ಷತಿ ರಕ್ಷಿತಃ" ಎಂಬ ದಿವ್ಯಸಂದೇಶವನ್ನು ಸತ್ಯವಾಗಿಸಿದೆ. ಪೂಜ್ಯ ಶ್ರೀಗಳವರ ಅನುಗ್ರಹದಿಂದ ಶ್ರೀ ಸಿದ್ಧಲಿಂಗೇಶ್ವರರ ಕೃಪೆಯಿಂದ ಈ ಮಹಾನ್ ಕ್ಷೇತ್ರವು ಅನಂತಕಾಲದವರೆಗೆ ಧರ್ಮರಕ್ಷಣಾ ಕೇಂದ್ರವಾಗಿರಲೆಂದು ಆಶಿಸಿ ವಿರಮಿಸುತ್ತೇವೆ.

### ಅವತರಿಸಿ ಬಾ ಗುರುವೆ

ನೀನೊಮ್ಮೆ ಬರಬಾರದೆ ಪರಮ ಗುರುವೆ
ಬಂದೊಮ್ಮೆ ನಮ್ಮೆಲ್ಲರನು ಸಲಹಬಾರದೆ

ಮತ್ತೊಮ್ಮೆ ಮಗದೊಮ್ಮೆ ಬರಬಾರದೆ !
ಹತ್ತು ಶತಮಾನದ ಹಿಂದೆ ನೀ ಬಂದಂತೆ
ಸುತ್ತೂರು ಪುರದೆ ಕಪಿಲ ಜಲದಿ ನಿಂದಂತೆ
ಸುತ್ತುತ್ತ ಬಂದ ರಾಜೇಂದ್ರಚೋಳಗೊಲಿದಂತೆ

ಹಿಂದೊಮ್ಮೆ ನೀನವತರಿಸಿ ಧರೆಗೆ ಬಂದಂತೆ
ಎಂದೆಂದು ಇಂದುಧರನ ನೀ ಸ್ಮರಿಸಿದಂತೆ
ಅಂದೊಮ್ಮೆ ಕೋಟಿ ಶಿವಮಂತ್ರ ಬರೆದಂತೆ
ಮುಂದೊಮ್ಮೆ ಬಂದ ಶಿವಯೋಗಿ ನೀನಂತೆ

ದೀನಜನರುದ್ಧಾರವಂ ಬಯಸಿ ಬಂದಂತೆ
ಜ್ಞಾನಾನ್ನದಾಸೋಹದೈಸಿರಿ ಧರೆಗೆ ಬಂದಂತೆ
ಇನ್ನೊಮ್ಮೆ ರಾಜೇಂದ್ರರಾಗಿ ಬಂದಂತೆ
ಮುನ್ನೊಮ್ಮೆ ಶ್ರೀ ಶಿವರಾತ್ರೀಶ ಬಂದಂತೆ

– ಎಚ್. ಗಂಗಾಧರನ್

# ರಸಋಷಿಯ ನುಡಿ ನೈವೇದ್ಯ

ಕುವೆಂಪು



ಎಲ್ಲರಿಗೂ ನಮಸ್ಕಾರ.

ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರ ಎಪ್ಪತ್ತನೆಯ ವರ್ಷದ ವರ್ಧಂತಿ ಸಮಾರಂಭಕ್ಕೆ ನಾನು ಬಂದಿರುವುದು ನಿಮ್ಮಲ್ಲಿ ಅನೇಕರಿಗೆ ಹೇಗೋ ಹಾಗೆ ಸ್ವತಃ ನನಗೇ ಆಶ್ಚರ್ಯವನ್ನುಂಟುಮಾಡಿದೆ! ಅದಕ್ಕೆ ಕಾರಣ, ಶ್ರೀ ರಾಮಕೃಷ್ಣ ಮಹಾಸಂಘವನ್ನುಳಿದು ಬೇರೆ ಯಾವುದೇ ಮಠ, ದೇವಸ್ಥಾನಗಳಿಗೆ ಎಂದೆಂದೂ ಹೋಗಿ ಅಲ್ಲಿನ ಯಾವುದೇ ಕಾರ್ಯಕ್ರಮಗಳಲ್ಲಿ ನಾನು ಇದುವರೆಗೂ ಭಾಗವಹಿಸದೇ ಇದ್ದದ್ದು!

ಇಂದಾದರೂ ಈ ಸಭೆಗೆ ನಾನು ಬಂದದ್ದಕ್ಕೆ ಎರಡು ಕಾರಣಗಳಿವೆ.

ಒಂದು, ಕಳೆದ ಎಪ್ಪತ್ತು-ಎಂಬತ್ತು ವರ್ಷಗಳಿಂದ ಕರ್ನಾಟಕದ ನಾನಾ ಭಾಗಗಳಲ್ಲಿ ವೀರಶೈವ ಧರ್ಮದ ವಿವಿಧ ಸಂಪ್ರದಾಯಗಳ ಸಾಧುಸಂತರು ಭರತಖಂಡದಲ್ಲಿಯೇ ಅಭೂತಪೂರ್ವವಾದ ಪ್ರಮಾಣದಲ್ಲಿ, ವಿಧಿವಿಧಾನಗಳಲ್ಲಿ ಶಾಲಾಕಾಲೇಜುಗಳನ್ನೂ, ಅವುಗಳಲ್ಲಿ ಓದುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಜಾತಿಮತಭೇದವಿಲ್ಲದೆ ಊಟ ವಸತಿಗಳನ್ನೂ ಏರ್ಪಡಿಸಿ ಲಕ್ಷ ಲಕ್ಷ ಜನರನ್ನು ವಿದ್ಯಾವಂತರನ್ನಾಗಿ ಮಾಡಿರುವುದಕ್ಕಾಗಿ ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುವುದು.

ಈ ಅನ್ನದಾನ, ವಿದ್ಯಾದಾನಗಳನ್ನು ತಪಸ್ಸಿನಂತೆ ಕೈಗೊಂಡಿರುವ ಸ್ವಾಮಿಗಳ ಅಗ್ರಪಂಕ್ತಿಯಲ್ಲಿದ್ದಾರೆ ಶ್ರೀ ಶ್ರೀ

(ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಅವರ ಅಮೃತ ಮಹೋತ್ಸವ ಮತ್ತು ಪಟ್ಟಾಧಿಕಾರ ಸುವರ್ಣ ಮಹೋತ್ಸವವನ್ನು ಪೂಜ್ಯರ ಜನ್ಮದಿನವಾದ 29-8-1986ರಂದು ಆಚರಿಸಿದ ಶುಭ ಸಂದರ್ಭದಲ್ಲಿ ರಾಷ್ಟ್ರಕವಿ ಶ್ರೀ ಕುವೆಂಪು ಅವರು ಯಾವುದೇ ಇಂಥ ಸಮಾರಂಭಕ್ಕೆ ಆಗಮಿಸಲು ಒಪ್ಪದವರು, ಅತ್ಯಂತ ಸಂತಸದಿಂದ, ಪೂಜ್ಯರ ಈ ಮಹಾನ್ ಸಮಾರಂಭಕ್ಕೆ ಆಗಮಿಸಿ, "ಅರ್ಚನ" ಅಭಿನಂದನ ಗ್ರಂಥವನ್ನು ಬಿಡುಗಡೆ ಮಾಡಿ ಮಾಡಿದ ಭಾಷಣ)

ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರು. ಆದುದರಿಂದ ಅವರೂ ಅತ್ಯಂತ ಅಭಿನಂದನೀಯರು ಎಂಬುದು ಸ್ವಯಂವೇದ್ಯವಾಗಿದೆ.

ಸ್ವಾಮಿ ವಿವೇಕಾನಂದರು ತಮ್ಮ ಗುರುದೇವರಾದ ಸರ್ವಧರ್ಮ ಸಮನ್ವಯಾಚಾರ್ಯ ಶ್ರೀ ರಾಮಕೃಷ್ಣ ಪರಮಹಂಸರಿಂದ ಪಡೆದು, ತಮ್ಮ ತಪಸ್ಸರ್ವಸ್ವವನ್ನೂ ಧಾರೆಯೆರೆದು ಜ್ವಲಂತಗೊಳಿಸಿದ ಮಹಾಮಂತ್ರ "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ" ಎಂಬುದು. ಅದರ ಅರ್ಥ "ಸ್ವಂತ ಮೋಕ್ಷಕ್ಕಾಗಿಯೂ, ಜಗತ್ತಿನ ಹಿತಕ್ಕಾಗಿಯೂ" ಎಂದು.

ಸನ್ಯಾಸ ಧರ್ಮಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿದ ವಿವೇಕಾನಂದರು ಈ ಮಂತ್ರವನ್ನು ಪುನರುಚ್ಚರಿಸಿ ಭಾರತದ ಅನೇಕ ಸನ್ಯಾಸ ಪಂಥಗಳೂ, ಗೃಹೀ ಭಕ್ತಸಂಘಗಳೂ ಅದರ ಅನುಷ್ಠಾನಕ್ಕೆ ತೊಡಗುವಂತೆ ಮಾಡಿದರು. ಕರ್ನಾಟಕದಲ್ಲಿ ವೀರಶೈವ ಮಠಾಧಿಪತಿಗಳು ಸ್ವಾಮಿ ವಿವೇಕಾನಂದರ ಮಂತ್ರಮಯ ಸಂದೇಶವನ್ನು ಶ್ರದ್ಧೆಯಿಂದ ಸ್ವೀಕರಿಸಿ ಅನುಷ್ಠಾನಕ್ಕೆ ತಂದಿರುವುದು ಈ ನೆಲದ ಭಾಗ್ಯವಿಶೇಷಗಳಲ್ಲೊಂದು ಎಂದು ನಾನು ನಂಬಿದ್ದೇನೆ.

ನಾನು ಇಲ್ಲಿಗೆ ಬರಲು ಒಪ್ಪಿದ್ದಕ್ಕೆ ಎರಡನೆಯ ಕಾರಣವೆಂದರೆ, ನನಗೆ ಅತ್ಯಂತ ಪ್ರಿಯವಾಗಿರುವ ನನ್ನ 'ವಿಶ್ವಮಾನವ ಸಂದೇಶ'ದ ಪ್ರತಿಗಳನ್ನು ಮುದ್ರಿಸಿ ಇಲ್ಲಿಗೆ ಆಗಮಿಸುವವರೆಲ್ಲರಿಗೂ ಅದನ್ನು ಹಂಚುವ ಭರವಸೆಯನ್ನು ಈ ಸಮಾರಂಭದ ವ್ಯವಸ್ಥಾಪಕರು ನನಗೆ ನೀಡಿದ್ದು.

"ವಿಶ್ವಮಾನವ ಸಂದೇಶ"ವು ನನಗೆ ಪ್ರಿಯವಾಗಿರುವುದಕ್ಕೆ ಕಾರಣ :

ಕರ್ನಾಟಕದ, ಭರತಖಂಡದ, ಇಡೀ ವಿಶ್ವದ ಉದ್ಧಾರವು ಈ ಸಂದೇಶದಲ್ಲಿ ನಿರೂಪಿಸಿರುವ ಪಂಚಮಂತ್ರಗಳನ್ನೂ ಸಪ್ತಸೂತ್ರಗಳನ್ನೂ ಆಚರಣೆಗೆ ತಂದಾಗಲೇ ಎಂಬ ನನ್ನ ಹೃತ್ಪೂರ್ವಕವಾದ ಶ್ರದ್ಧೆ.

ಜನರ ಹೃದಯದಲ್ಲಿ ಮನೆಮಾಡಿರುವ ಮೂಢ ನಂಬಿಕೆಗಳನ್ನೂ, ಜಾತೀಯತೆಯನ್ನೂ ನಿರ್ಮೂಲ ಮಾಡುವವರೆಗೆ ಮಾನವಜನಾಂಗದ ಉದ್ಧಾರ ಸಾಧ್ಯವೇ ಇಲ್ಲ ಎಂಬುದು ಎಲ್ಲರಿಗೂ ಮನವರಿಕೆಯಾಗಬೇಕು. ಮಹತ್ಪ್ರಮಾಣದ ಸಾಮಾಜಿಕ ಕ್ರಾಂತಿಯೊಂದು ವಿಚಾರಕ್ರಾಂತಿಯ ರೂಪದಲ್ಲಿ ನಡೆದು ಮಾನವನ ಮತಿಯಲ್ಲಿ ವಿವೇಕವನ್ನು ಸ್ಥಾಪಿಸಲೇಬೇಕಾಗಿದೆ.

ಎರಡು ಸಾವಿರದ ಐದುನೂರು ವರ್ಷಗಳ ಹಿಂದೆ ಭರತಖಂಡದಲ್ಲಿ ಗೌತಮಬುದ್ಧನು ಅಂಥದೊಂದು ಕ್ರಾಂತಿಯನ್ನು ನಡೆಸಿದ. ಆದರೆ ಪುರೋಹಿತಶಾಹಿಯು ಅದನ್ನು ವಿಫಲಗೊಳಿಸಿ ಬೌದ್ಧಧರ್ಮವು ಈ ದೇಶದಿಂದ ಕಣ್ಮರೆಯಾಗುವಂತೆ ಮಾಡಿತು. ಅನಂತರ ಮಹಾವೀರನು ಆರಂಭಿಸಿದ ಕ್ರಾಂತಿಯೂ ಪುರೋಹಿತಶಾಹಿಯ ಚಾಕಚಕ್ಯತೆಯಿಂದ ಮತ್ತೆ ವಿಫಲವಾಯಿತು. ಭರತಖಂಡವು ಕಂಡ ಮತ್ತೊಬ್ಬ ಮಹಾಕ್ರಾಂತಿಕಾರಿಯೆಂದರೆ ಬಸವಣ್ಣನವರು. ಎಂಟುನೂರು ವರ್ಷಗಳ ಹಿಂದೆ ಜಾತಿ, ಮತ, ಲಿಂಗ, ವೃತ್ತಿಭೇದಗಳನ್ನೆಲ್ಲ ನಿರ್ಮೂಲನಗೊಳಿಸಲು ಮಹತ್ಪ್ರಮಾಣದಲ್ಲಿ ಸಾಧನೆ ನಡೆಸಿದ ಮಹಾಪುರುಷರು ಅವರು. ಅವರ ಸಾಧನೆಯ ಮಹತ್ತನ್ನೂ, ಅದಕ್ಕಾಗಿ ಅವರು ಮಾಡಿದ ತ್ಯಾಗದ ವೈಭವವನ್ನೂ ಕಂಡ ನನ್ನಲ್ಲಿನ ಕವಿಚೇತನ ಅವರಿಗೆ ಈ ಮಾತುಗಳಲ್ಲಿ ಕಾವ್ಯನಮನವನ್ನು ಸಲ್ಲಿಸಿತು.

ಕಾರ್ತಿಕದ ಕತ್ತಲಲಿ ಆಕಾಶದೀಪವಾಗಿ
ನೀ ಬಂದೆ,
ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ
ಎಂಟು ಶತಮಾನಗಳ ಹಿಂದೆ,
ಅಗ್ನಿಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ
ದೇವದಯೆಯೊಂದು ಹೇ ಧೀರಾವತಾರ
ಶ್ರೀ ಬಸವೇಶ್ವರಾ !

ಜಾತಿಪದ್ಧತಿಯ ಹೋಮಕೂಪಕ್ಕೆ
ಬಿದ್ದು, ವೈದಿಕರ ಯಜ್ಞತಾಪಕ್ಕೆ
ಬಲಿಪೋದ ದಲಿತಜೀವರನೆತ್ತಿ ಮತಿವಿಚಾರಕ್ಕೆ
ಕಾಯಕದ ದಿವ್ಯತತ್ತ್ವದಾ ಸುಕ್ಷೇಮ ಧರ್ಮನಾಕಕ್ಕೆ
ನಡೆಸಿದ ಮಹಾತ್ಮನೆ ನಿನಗೆ ನಮೋ ನಮಃ

ಇಂದಿಗೂ ನಾವು ನಿನ್ನೆತ್ತರಕೆ ಏರಲಾರದೆ ಅಯ್ಯೋ
ಮತದ ಉಸುಬಿಗೆ ಸಿಲುಕಿ ತತ್ತರಿಸುತಿಹೆವಯ್ಯ!
ಬಾರಯ್ಯ ಕೈ ಹಿಡಿದೆತ್ತಿ ಬದುಕಿಸು ನಮ್ಮನೆಳೆದು
ವರ್ಣಾಶ್ರಮದ ಹೆಸರ ಹೊಲೆಗೆಸರ ವಂಚನೆಯ

ಹೊಂಡದಿಂದೆ!
ಭಕ್ತಿಗಂಗೆಯನೆರೆದು
ಭಾಗವತ ಶಕ್ತಿಯಿಂ ಕರೆದು
ಮತಮೌಢ್ಯದಜ್ಞಾನಪಂಕವನು ತೊಳೆದು
ಶುಚಿಗೊಳಿಸು ವಿಜ್ಞಾನ ವೇದಾಂತ ತೀರ್ಥದಿಂದೆ!

ಭರತಖಂಡದ ಜನಜೀವನದ ದುರಂತವೆಂದರೆ ಪ್ರತಿಯೊಬ್ಬ ವಿಚಾರಕ್ರಾಂತಿಪುರುಷನನ್ನೂ, ಉದ್ಧಾರಪರವಾದ ಅವನ ಸಮಸ್ತ ಸಾಧನೆ- ಬೋಧನೆಗಳನ್ನೂ ಪುರೋಹಿತಶಾಹಿಯು ನುಂಗಿ ನಿರ್ನಾಮಗೊಳಿಸುವುದು. ಬಸವೇಶ್ವರರೂ ಇದಕ್ಕೆ ಹೊರತಾಗಲಿಲ್ಲ. ಮಾತ್ರವಲ್ಲ, ಅವರ ಸಂದೇಶದ ಮಹತ್ತನ್ನು ಅರಿಯದೇ ಹೋದದ್ದು. ಅಂದು ಮಾತ್ರವಿರಲಿ, ಇಂದೂ ಜಾತೀಯತೆಯು ಈ ದೇಶದ, ಏಕೆ ಮಾನವತೆಯ ವಿಷಮ ಸಾಂಕ್ರಾಮಿಕ, ಕ್ಯಾನ್ಸರ್, ಏಯ್ಡ್ಸ್ ಎಂದು ನಿರ್ವಿವಾದವಾಗಿ ತೀರ್ಮಾನ ಮಾಡುವ ಈ ವಿಜ್ಞಾನಯುಗದಲ್ಲೂ ಜಾತೀಯತೆಯನ್ನು ನಿರಾಕರಿಸಿದ ಬಸವೇಶ್ವರರ ಅನುಯಾಯಿಗಳೇ ಒಳಜಾತಿಗಳನ್ನು ಸೃಷ್ಟಿಸಿಕೊಂಡು ಒಬ್ಬರು ಮತ್ತೊಬ್ಬರಿಗಿಂತ ಶ್ರೇಷ್ಠ ಎಂದು ಭಾವಿಸಿ ವಿಚಾರಪರರ ಕಣ್ಣಿನಲ್ಲಿ ನಗೆಪಾಟಲಾಗಿರುವುದು!

ಇದು ಸಹಸ್ರ ವರ್ಷಗಳ ಭರತಖಂಡದ, ಏಕೆ ಇಡೀ ಜಗತ್ತಿನ ಮಾನವಜನಾಂಗದ ಧರ್ಮ, ಸಂಸ್ಕೃತಿ, ವಿಚಾರ, ವಿಜ್ಞಾನಗಳೆಲ್ಲ ಕಳೆದ ಶತಮಾನದ ಮಧ್ಯಭಾಗದಲ್ಲಿ, ಗಂಗಾತೀರದ ದಕ್ಷಿಣೇಶ್ವರದಲ್ಲಿ ಮಾನವರೂಪವನ್ನು ಧರಿಸಿ ಘೋರವಾದ ತಪಸ್ಸನ್ನು ನಡೆಸಿ, ಸರ್ವಧರ್ಮಸಮನ್ವಯದ ಮಂಗಳಮಂತ್ರವನ್ನು ಸಾಕ್ಷಾತ್ಕರಿಸಿಕೊಂಡಿತು – ಶ್ರೀ ರಾಮಕೃಷ್ಣ ಪರಮಹಂಸರ ರೂಪದಲ್ಲಿ. ಅವರ ವ್ಯಕ್ತಿತ್ವ ಮತ್ತು ಸಾಕ್ಷಾತ್ಕಾರಗಳ ಸ್ವರೂಪವು ನನ್ನ "ಶ್ರೀಗುರು" ಎಂಬ ಕವನದಲ್ಲಿ ಹೀಗೆ ವ್ಯಕ್ತವಾಗಿದೆ:

ಕ್ರಿಸ್ತ ಮಹಮದ ರಾಮಕೃಷ್ಣ ಜೊರಾಸ್ತ ಗೌತಮರು
ದಿವ್ಯ ವೇದ ಕೊರಾನು ಬೈಬಲು ತಲ್ಮಡಾದಿಗಳು
ಗುಡಿಯು ಚರ್ಚು ಮಸೀದಿ ಆಶ್ರಮ ಅಗ್ನಿಪೂಜೆಗಳು
ಕಾಶಿ ಮೆಕ್ಕಗಳೆಲ್ಲ ನಿನ್ನೊಳಗೈಕ್ಯವಾ'ಗಿಹವು'!

ಮತ್ತೆ ಕವಿವಾಣಿ ಹಾಡಿತು –

ತ್ರೇತೆಯೊಳ್ ಶ್ರೀರಾಮನೋಲವತರಿಸಿ ಬಂದೆ;
ದ್ವಾಪರದೊಳು ಕೃಷ್ಣ ಶ್ರೀರೂಪದಲಿ ನಿಂದೆ;
ಸರ್ವಧರ್ಮಾವತಾರಂ ಕಲಿಯುಗದಿ ಸಂದೆ;
ಶ್ರೀ ರಾಮಕೃಷ್ಣ ಪ್ರಭೋ ತವ ಸುಪ್ರಭಾತಂ!

ನಜರೇತಿನಲ್ಲಿ ಯೇಸು ಸ್ವಾಮಿಯಾಗಿದ್ದೆ;
ನದಿಯ ದಡದೊಳ್ ಶ್ರೀಕೃಷ್ಣ ಚೈತನ್ಯನಾಗಿದ್ದೆ;
ಮತ್ತೆ ಭಾರತದಲ್ಲಿ ನೀ ಮೈದೋರುತೆದ್ದೆ;
ಶ್ರೀ ರಾಮಕೃಷ್ಣ ಪ್ರಭೋ ತವ ಸುಪ್ರಭಾತಂ॥

ಆ ದೇವಮಾನವನ ಸರ್ವಧರ್ಮಸಮನ್ವಯದ, ಶುದ್ಧ ಅಧ್ಯಾತ್ಮದ ದಿವ್ಯ ಸಂದೇಶವು ಮಾತ್ರವೇ ಸಮಸ್ತ ಮಾನವತೆಗೆ ತಾರಕಮಂತ್ರವಾಗಬಲ್ಲದು. ನಿಮ್ಮೆಲ್ಲರಿಗೂ ಈಗಾಗಲೇ ಹಂಚಿರುವ ನನ್ನ "ವಿಶ್ವಮಾನವ ಸಂದೇಶ"ವು ಅವರ ಮತ್ತು ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರ ಉಪದೇಶದ ಸಾರವನ್ನೆಲ್ಲ ಒಳಗೊಂಡಿದೆ. ಅದರ ಪಠನ ಮತ್ತು ಅನುಷ್ಠಾನದಿಂದ ತಮಗೆಲ್ಲ ಶ್ರೇಯಸ್ಸಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಸುತ್ತೂರು ಸ್ವಾಮಿಯವರ ಸಾಧನೆಗಳ ಮಹತ್ತು, ಬೃಹತ್ತುಗಳನ್ನು ಸೂಚಿಸುವ ಈ ಬೃಹದ್ಗ್ರಂಥವನ್ನು ನಾನು ಸಂತೋಷದಿಂದ ಬಿಡುಗಡೆ ಮಾಡುತ್ತೇನೆ. ಇಷ್ಟೊಂದು ಅಮೂಲ್ಯ ಲೇಖನಗಳುಳ್ಳ ಈ ಪ್ರಮಾಣದ ಗ್ರಂಥಸಂಪಾದನೆ ಎಷ್ಟು ಕಷ್ಟದ, ಹೊಣೆಗಾರಿಕೆಯ ಕೆಲಸ ಎಂಬುದನ್ನು ಬಲ್ಲೆ. ಇದರ ಸಂಪಾದನ ಸಲಹಾಮಂಡಲಿಯ ಸದಸ್ಯರನ್ನೂ, ಮುಖ್ಯ ಸಂಪಾದಕರಾದ ಡಾ. ಎಚ್. ಪಿ. ಮಲ್ಲೇದೇವರು ಅವರನ್ನೂ ನಾನು ಅಭಿನಂದಿಸುತ್ತೇನೆ.

ಶ್ರೀ ಸ್ವಾಮಿಯವರು ಆಯುರಾರೋಗ್ಯಾದಿ ಭಾಗ್ಯದಿಂದ ಕೂಡಿದ್ದು, ಹೀಗೆಯೇ ಮಂದಹಾಸದ ಬೆಳುದಿಂಗಳನ್ನು ಸೂಸುತ್ತಾ ಸಮಾಜಸೇವೆ, ಸಮಾಜಸುಧಾರಣೆಗಳನ್ನು ನಡೆಸುತ್ತಾ ಈ ಬಗೆಯ ಸೇವಾಕಾರ್ಯಗಳಲ್ಲಿ ತೊಡಗಿರುವವರಿಗೆಲ್ಲ ಆದರ್ಶಪ್ರಾಯರಾಗಿ ಮುಂದುವರೆಯಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಮತ್ತೊಮ್ಮೆ ಎಲ್ಲರಿಗೂ ನಮಸ್ಕಾರ.

□

## ಮಠಮಾನ್ಯಗಳು ಸಂಸ್ಕೃತಿ ಹಾಗೂ ಸಂಸ್ಕಾರ ಬೆಳೆಸುತ್ತಿವೆ



ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉಪ ವಿಭಾಗಾಧಿಕಾರಿಗಳಾದ ಶ್ರೀ ಆಶಪ್ಪರವರು ಉದ್ಘಾಟಿಸಿದರು. ಪ್ರೊ. ಎಚ್.ಬಿ. ದೇವಣ್ಣ, ಮುಡುಕುತೊರೆಯ ಶ್ರೀ ಕಲ್ಮಠದ ಶ್ರೀ ನಂದಿಕೇಶ್ವರ ಸ್ವಾಮಿಗಳು ಹಾಗೂ ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿಯವರುಗಳಿದ್ದಾರೆ. ಪಕ್ಕದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಬಿ. ರಂಗೇಗೌಡರವರು ಮಾತನಾಡುತ್ತಿರುವುದು (25 ಜುಲೈ 2025)

ಮಠಮಾನ್ಯಗಳು ಸಂಸ್ಕೃತಿ ಹಾಗೂ ಸಂಸ್ಕಾರ ಬೆಳೆಸುತ್ತಿವೆ ಎಂದು ಮೈಸೂರಿನ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಬಿ. ರಂಗೇಗೌಡರವರು ಹೇಳಿದರು.

**ಸುತ್ತೂರು ಶ್ರೀಮಠದಲ್ಲಿ** ದಿನಾಂಕ 24.7.2025 ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ಕುರಿತ ಪ್ರವಚನ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಕ್ರಾಂತಿಯನ್ನೇ ಮಾಡಿದರು. ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸುಧಾರಣೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದರು. ಆಧುನಿಕತೆಯ ಸೋಗಿನಲ್ಲಿ ಮೊಬೈಲ್ ಗೀಳಿನಿಂದ ಭಜನೆ, ಪ್ರವಚನ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಕಡಿಮೆಯಾಗುತ್ತಿದ್ದು, ಸುತ್ತೂರು ಮಠವು ಸೇರಿದಂತೆ ನಾಡಿನ ಮಠಮಾನ್ಯಗಳು ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದರ ಮೂಲಕ ನಿರಂತರವಾಗಿ ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿವೆ ಎಂದು ಹೇಳಿದರು.

ಮೈಸೂರಿನ ಉಪವಿಭಾಗಾಧಿಕಾರಿಗಳವರಾದ ಶ್ರೀ ಆಶಪ್ಪನವರು, ಇಂದಿನ ದಿನಗಳಲ್ಲಿ ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತಿದ್ದು, ಶಿಕ್ಷಣದ ಜೊತೆಗೆ ಸಂಸ್ಕಾರವೂ ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಸಮಾಜದಲ್ಲಿ ಮೌಲ್ಯಗಳನ್ನು ಮಠಗಳು ನಿರಂತರವಾಗಿ ನೀಡುತ್ತಿವೆ. ಧಾರ್ಮಿಕ ಆಚರಣೆಗಳ ಮೂಲಕ ಜನರಲ್ಲಿ ಪರಸ್ಪರ ಸಹಕಾರ, ಸಹಬಾಳ್ವೆ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು.

ಮುಡುಕುತೊರೆಯ ಶ್ರೀ ಕಲ್ಮಠದ ಶ್ರೀ ನಂದಿಕೇಶ್ವರ ಸ್ವಾಮಿಗಳವರು, ಮಾಸಗಳಲ್ಲಿ ಶ್ರೇಷ್ಠವಾದುದು ಶ್ರಾವಣಮಾಸ. ಪ್ರಾಚೀನ ಕಾಲದಲ್ಲಿ ಶಿಷ್ಯರು ತಾವು ಹಿಂದೆ ಕಲಿತ ವಿದ್ಯೆಯನ್ನು ಶ್ರಾವಣ ಮಾಸದಲ್ಲಿ ಗುರುವಿಗೆ ಒಪ್ಪಿಸುತ್ತಿದ್ದರು. ಹೊಸ ವೇದ ಪಾಠಗಳನ್ನು ಕಲಿಯುತ್ತಿದ್ದರು. ಪ್ರವಚನಗಳನ್ನು ಶ್ರವಣ ಮಾಡುವುದರಿಂದ ಮಾನವನು ಲೌಕಿಕ ಜಂಜಾಟದಿಂದ ಪಾರಾಗಬಹುದು ಎಂದು ನುಡಿದರು.

ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿಯ ಪ್ರವಚನವನ್ನು ಜೆಎಸ್‌ಎಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎಚ್.ಬಿ. ದೇವಣ್ಣನವರು ನಡೆಸಿಕೊಟ್ಟರು. ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಡಿ.ಎಸ್. ಸಿದ್ಧಲಿಂಗಸ್ವಾಮಿಯವರು ಕಾವ್ಯವಾಚನ ಮಾಡಿದರು. ಕಾರ್ಯಕ್ರಮದಲ್ಲಿ ಗುರುಕುಲದ ಸಾಧಕರು, ಜೆಎಸ್‌ಎಸ್ ಸಂಸ್ಥೆಗಳ ಅಧಿಕಾರಿ ವರ್ಗದವರು ಹಾಗೂ ಗ್ರಾಮಸ್ಥರುಗಳು, ಸುತ್ತಮುತ್ತಲ ಭಕ್ತರು ಭಾಗವಹಿಸಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕರಾದ ಶ್ರೀಮತಿ ಬಿ. ವೇದಾವತಿ ಸ್ವಾಗತಿಸಿದರು. ಶ್ರೀಮತಿ ಜಿ. ನಂದಿನಿ ವಂದಿಸಿದರು. ಶ್ರೀ ಜಿ. ಶಿವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

## ಯುವಜನರ ಮನಸ್ಸುಗಳು ಆಂತರಿಕವಾಗಿ ವಿಕಸನಗೊಳ್ಳಬೇಕು



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ.ಡಿ. ಸುದರ್ಶನ್‌ರವರು ಉದ್ಘಾಟಿಸಿದರು. ಸಂಗಮ ಕ್ಷೇತ್ರದ ಕಾರ್ಯಸ್ವಾಮಿ ಮಠದ ಶ್ರೀಗಳು, ಡಾ. ಕೆ. ಅನಂತರಾಮು ಹಾಗೂ ವಿದ್ವಾನ್ ಕೃ. ರಾಮಚಂದ್ರರವರಿದ್ದಾರೆ (25 ಜುಲೈ 2025)

ಯುವಜನರು ಕೇವಲ ಬಹಿರಂಗದ ಆಕರ್ಷಣೆಗಳಿಗೆ ಒಳಗಾಗದೆ ಆಂತರಿಕವಾಗಿ ಬುದ್ಧಿ ಮತ್ತು ಮನಸ್ಸನ್ನು ವಿಕಸನಗೊಳಿಸಿಕೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ.ಡಿ. ಸುದರ್ಶನ್‌ರವರು ಹೇಳಿದರು.

**ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ** ದಿನಾಂಕ 24.7.2025 ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ಕುರಿತ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಯುವಜನರು ಬಾಹ್ಯಜೀವನದ ರೋಮಾಂಚನಕ್ಕೆ ಒಳಗಾಗುತ್ತಿದ್ದಾರೆ. ಇಂತಹ ಭ್ರಮಾಲೋಕದಿಂದ ಅವರು ಹೊರಬರಬೇಕು. ಮಹನೀಯರ ಪ್ರತಿಮೆಗಳನ್ನು ಸ್ಥಾಪಿಸುವಲ್ಲಿ ತೋರಿಸುವ ಉತ್ಸಾಹದಂತೆಯೇ ಅವರ ವಿಚಾರಧಾರೆಗಳನ್ನು ಮನಸ್ಸಿನಲ್ಲಿ ಸ್ಥಾಪಿಸಿಕೊಂಡು ಜೀವನದಲ್ಲಿ ಪಾಲಿಸಬೇಕಾದ ಅಗತ್ಯತೆ ಇದೆ. ಇಂದು ಜನರು ಬಿಜ್ಜಳನ ಆಸ್ಥಾನದಲ್ಲಿದ್ದ ರಾಜ ಪೋಷಾಕಿನ ಕುದುರೆಯ ಮೇಲಿರುವ ಬಸವಣ್ಣನವರನ್ನು ವೈಭವೋಪೇತವಾಗಿ ಕಾಣುವ ಬದಲು ಆಧ್ಯಾತ್ಮಿಕ ಮೇರುವಾದ ವಚನಗಳನ್ನು ರಚಿಸಿದ ಬಸವಣ್ಣನವರನ್ನು ಆರಾಧಿಸುವ ಕಡೆ ಗಮನ ಹರಿಸಬೇಕು. ಖಡ್ಗಕ್ಕಿಂತ ಲೇಖನಿ ಹರಿತ ಎಂಬಂತೆ ಬಸವಣ್ಣನವರು ಖಡ್ಗವನ್ನು ತ್ಯಜಿಸಿ ಲೇಖನಿಯನ್ನು ಹಿಡಿದು ವಚನಗಳನ್ನು ರಚಿಸಿದರು. ಅದರ ಮೂಲಕ ಅವರು ಸಮಾಜವನ್ನು ತಿದ್ದುವ ಕಾರ್ಯವನ್ನು ಮಾಡಿದರು. ಬಸವಾದಿ ಶರಣರು ಅನುಭವ ಮಂಟಪದಲ್ಲಿ ಆರಂಭಿಸಿದ ದಾರಿಯಲ್ಲಿ ಎಲ್ಲರೂ ಸಾಗಬೇಕು. ಅವರ ಅತ್ಯುತ್ತಮ ಆಲೋಚನೆಗಳನ್ನು ಎಲ್ಲರೂ ಆತ್ಮವಿಮರ್ಶೆಗೆ ಒಳಪಡಿಸಿಕೊಂಡು ಬದುಕಿನಲ್ಲಿ ದೃಢ ನಿರ್ಧಾರಗಳನ್ನು ಕೈಗೊಳ್ಳಬೇಕು. ಕನ್ನಡ ನಾಡಿನ ಚರಿತ್ರೆಯಲ್ಲಿ ಲಕ್ಕಣ್ಣ ದಂಡೇಶನ ಕಾಲ ಬಹಳ ವಿಶಿಷ್ಟವಾದುದು. ಎರಡು ಸಾವಿರಕ್ಕೂ ಹೆಚ್ಚು ಪದ್ಯಗಳನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿರುವುದು ವಿಶೇಷವಾದ ಸಂಗತಿ. ಶಿವತತ್ತ್ವ ಚಿಂತಾಮಣಿ ಗ್ರಂಥ ಬಸವಯುಗದ ನಂತರ ಶೈವ ಮತ್ತು ವೀರಶೈವ ಸಂಸ್ಕೃತಿಯ ಕೊಂಡಿಯಾಗಿದೆ ಎಂದು ತಿಳಿಸಿದರು.

ಸಂಗಮ ಕ್ಷೇತ್ರದ ಶ್ರೀ ಕಾರ್ಯಸ್ವಾಮಿ ಮಠದ ಶ್ರೀ ಮಹೇಶ್ವರ ಸ್ವಾಮಿಗಳು ಆತ್ಮವೆಂಬುದು ನಿತ್ಯ ಪರಿಶುದ್ಧವಾದುದು. ಓಂ ತತ್ ಸತ್ ಎಂಬಂತೆ ಪರಮಾತ್ಮನೇ ಅಂತಿಮ ಸತ್ಯ. ಇದು ಭಗವಂತನ ಅವ್ಯಕ್ತ ವಾಸ್ತವ ಮತ್ತು ಸತ್ಯವನ್ನು ಸೂಚಿಸುತ್ತದೆ. ಭಗವಂತನ ಸ್ವರೂಪಗಳು ಅನೇಕವಾಗಿದ್ದರೂ ದೇವರು ಒಬ್ಬನೇ. ಆಧ್ಯಾತ್ಮ ಸಾಧನೆಯಲ್ಲಿ ಶ್ರವಣಕ್ಕೆ ಮೊದಲ ಸ್ಥಾನವಿದೆ. ಶ್ರವಣ ಮನಸ್ಸಿನ ಮೇಲೆ ಅಗಾಧವಾದ ಪ್ರಭಾವವನ್ನು ಬೀರುತ್ತದೆ. ಕೇಳಿದ್ದನ್ನು ಬದುಕಿನಲ್ಲಿ ಅಳವಡಿಸಿಕೊಂಡು ಪಾಲಿಸಿದರೆ ಜೀವನ ಪಾವನವಾಗುತ್ತದೆ ಎಂದು ತಿಳಿಸಿದರು.

ಡಾ. ಕೆ. ಅನಂತರಾಮುರವರು ಶ್ರಾವಣಕ್ಕೂ-ಶ್ರವಣಕ್ಕೂ ಅವಿನಾಭಾವ ಸಂಬಂಧವಿದೆ. ಈ ಮಾಸದಲ್ಲಿ ಸದ್ವಿಚಾರಗಳ ಚಿಂತನೆ ಮಾಡಿದರೆ ಸಾಲದು, ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು. ಸುಸಂಸ್ಕೃತರಾಗಿ ಬೆಳೆಯಲು ಇಂತಹ ಸತ್ಸಂಗಗಳು, ಪ್ರವಚನಗಳು ನಡೆಯುತ್ತಲೇ ಇರಬೇಕು. ಇದರಿಂದ ಚಿತ್ತಶುದ್ಧಿಯಾಗುತ್ತದೆ ಮತ್ತು ಏಕಾಗ್ರತೆ ಹೆಚ್ಚುತ್ತದೆ. ಪೀಳಿಗೆಯಿಂದ ಪೀಳಿಗೆಗೆ ಬುದ್ಧಿ ಬೆಳೆಯುತ್ತಿದೆ, ಆದರೆ ವಿವೇಕ ಬೆಳೆಯುತ್ತಿಲ್ಲ. ಶಾಲಾ-ಕಾಲೇಜುಗಳಲ್ಲಿ ಸರಿಯಾದ ನೈತಿಕ ಶಿಕ್ಷಣ ದೊರೆಯುತ್ತಿಲ್ಲ. ಇಂದಿನ ಮಕ್ಕಳು ಕೇವಲ ಅಂಕದಾಹಕ್ಕೆ ಸಿಲುಕಿದ್ದಾರೆ. ಗಾಂಧೀಜಿಯವರು ನೀತಿ ಇಲ್ಲದ ಶಿಕ್ಷಣ ಸಾಮಾಜಿಕ ಪಾಪಕ್ಕೆ ಸಮವೆಂದಿದ್ದಾರೆ. ಯುವಜನರು ಇಂತಹ ಪ್ರವಚನ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು. ಬದುಕು ಉತ್ತಮ ಮೌಲ್ಯಗಳಿಂದ ರೂಪುಗೊಳ್ಳಬೇಕು. ಕುವೆಂಪು ಅವರು ಹೇಳುವಂತೆ ಬುದ್ಧಿ ಮತ್ತು ಭಾವ ಒಂದಕ್ಕೊಂಡು ಬೆಸೆದುಕೊಳ್ಳಬೇಕು. ಶ್ರಾವಣ ಮಾಸ ಭಕ್ತಿಯ ಬೀಜಗಳನ್ನು ಬಿತ್ತುವ ಕಾಲ. ಯಾವುದೇ ಕಾರ್ಯವನ್ನು ಶ್ರದ್ಧೆ ಮತ್ತು ಭಕ್ತಿಯಿಂದ ನಿರಂತರವಾಗಿ ಮಾಡುವುದೇ ಅನುಷ್ಠಾನ. ಅಂತಹ ಅನುಷ್ಠಾನ ಶ್ರೀಮಠದಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳವರು ಅದಕ್ಕೆ ಸಾವಿರಪಟ್ಟು ವೇಗವನ್ನು ನೀಡಿದ್ದಾರೆ ಎಂದು ಹೇಳಿದರು.

ಗಮಕ ವಿದ್ವಾನ್ ಕೃ. ರಾಮಚಂದ್ರರವರು ವಾಚನ ಮಾಡಿದರು. ಪ್ರೊ. ಮೊರಬದ ಮಲ್ಲಿಕಾರ್ಜುನರವರು ಸ್ವಾಗತಿಸಿದರು. ಶ್ರೀ ವೀರಭದ್ರಸ್ವಾಮಿ ವಂದಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಮೈಸೂರು ಶ್ರೀ ಸುತ್ತೂರು ಮಠದ ಸಿಬ್ಬಂದಿವರ್ಗದವರು ಸೇವಾರ್ಥ ನೆರವೇರಿಸಿದರು.

## ಗುರು–ಶಿಷ್ಯ ಸಂಬಂಧದ ಪವಿತ್ರ ಸಂಕೇತ ಗುರುಪೂರ್ಣಿಮೆ

ಗುರು–ಶಿಷ್ಯರ ನಡುವಿನ ಪವಿತ್ರ ಸಂಬಂಧದ ಸಂಕೇತವಾಗಿ ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತದೆ ಎಂದು ಮೈಸೂರು ಆಕಾಶವಾಣಿಯ ನಿವೃತ್ತ ಹಿರಿಯ ಉದ್ಘೋಷಕರಾದ ಶ್ರೀ ಪ್ರಭುಸ್ವಾಮಿ ಚ. ಮಳಿಮಠರವರು ಹೇಳಿದರು.

**ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ** ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಗುರುಪೂರ್ಣಿಮೆ ಹಾಗೂ 281ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಂಸ್ಕೃತದಲ್ಲಿ **"ಗು"** ಎಂದರೆ ಅಂಧಕಾರ ಅಥವಾ ಅಜ್ಞಾನ, **"ರು"** ಎಂದರೆ ಕಳೆಯುವ ಅಥವಾ ದೂರ ಮಾಡುವ ಎನ್ನುವ ಅರ್ಥವಿದೆ. ಹೀಗಾಗಿ ಗುರು ಅಂಧಕಾರ ಮತ್ತು ಅಜ್ಞಾನವನ್ನು ದೂರ ಮಾಡುವವನು. ಭಾರತೀಯ ಪಂಚಾಂಗದಲ್ಲಿ ಆಷಾಢ ಮಾಸದ ಹುಣ್ಣಿಮೆಯ ದಿನವನ್ನು ಗುರುಪೂರ್ಣಿಮೆ ಎಂದು ಆಚರಿಸುತ್ತೇವೆ. ಈ ದಿನದಂದು ಗುರುವಿನ ಪ್ರಭಾವ ಬೇರೆ ದಿನಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ಭಾರತೀಯರು ಈ ದಿನದಂದು ಗುರುವಿಗೆ ಪೂಜೆಯನ್ನು ಸಲ್ಲಿಸುವ ಸಂಪ್ರದಾಯವಿದೆ. ಗುರುಪೂರ್ಣಿಮೆಗೆ ಧಾರ್ಮಿಕವಾಗಿ ಮತ್ತು ಶೈಕ್ಷಣಿಕವಾಗಿಯೂ ಪ್ರಾಮುಖ್ಯತೆ ಇದೆ. ಭಾರತೀಯ ಪರಂಪರೆಯಲ್ಲಿ ವೇದವ್ಯಾಸ ಮಹರ್ಷಿಗಳ ಜನ್ಮದಿನದ ಅಂಗವಾಗಿ ಗುರುಪೂರ್ಣಿಮೆಯನ್ನು ಆಚರಿಸಿದರೆ, ಬೌದ್ಧ ಧರ್ಮದಲ್ಲಿ ಬುದ್ಧರು ಪ್ರಥಮ ಧರ್ಮೋಪದೇಶ ನೀಡಿದ ಜ್ಞಾಪಕಾರ್ಥವಾಗಿ ಇದನ್ನು ಆಚರಿಸಲಾಗುತ್ತಿದೆ. ಭಾರತೀಯ ಶಾಸ್ತ್ರೀಯ ಸಂಗೀತವು ಗುರು–ಶಿಷ್ಯ ಪರಂಪರೆಯನ್ನು ಪಾಲಿಸುವುದರಿಂದ ಸಂಗೀತ ಕಲಿಯುವ ವಿದ್ಯಾರ್ಥಿಗಳು ಈ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಗುರುಗಳಿಗೆ ವಂದಿಸಿ, ಆರಾಧಿಸಿ ಗೌರವಿಸುತ್ತಾರೆ. ಧರ್ಮ ಗ್ರಂಥಗಳಲ್ಲಿ ಗುರುವಿಗೆ ದೇವರಿಗಿಂತಲೂ ಹೆಚ್ಚಿನ ಸ್ಥಾನವಿದೆ. ಗುರುವೇ ಸರ್ವಸ್ವ, ಗುರುವಿಗೆ ಕೋರುವ ನಿಷ್ಠೆಯೇ ಅಂತಿಮ ಧರ್ಮ ಎಂದು ಧರ್ಮ ಗ್ರಂಥಗಳು ಹೇಳುತ್ತವೆ. ಕನಕದಾಸರು ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದು ಗುರುವಿನ ಸ್ಥಾನ ಮತ್ತು ಮಹತ್ವವನ್ನು ಹೇಳಿದ್ದಾರೆ ಎಂದು ತಿಳಿಸಿದರು.

ನಂತರ ಜರುಗಿದ 281ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜರವರು ಗಾಯನ ಪ್ರಸ್ತುತಿ ಪಡಿಸಿದರು. ವಯೊಲಿನ್‌ನಲ್ಲಿ ವಿದ್ವಾನ್ ಎಸ್. ಜನಾರ್ದನ್, ಮೃದಂಗದಲ್ಲಿ ವಿದ್ವಾನ್ ಅನಿರುದ್ಧ ಎಸ್. ಭಟ್ ಮತ್ತು ಘಟಂನಲ್ಲಿ ವಿದ್ವಾನ್ ಎಂ.ಆರ್. ಮಂಜುನಾಥ್‌ರವರುಗಳು ಪಕ್ಕವಾದ್ಯ ಸಹಕಾರ ನೀಡಿದರು. ಪ್ರೊ. ಕೆ. ರಾಮಮೂರ್ತಿರಾವ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

## ಪ್ರಕೃತಿಯ ಸಮತೋಲನ ಅತ್ಯಂತ ಮುಖ್ಯ

ಮನುಷ್ಯನು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಾಗಿ ಇರಬೇಕಾದರೆ, ಪ್ರಕೃತಿಯ ಸಮತೋಲನ ಬಹಳ ಮುಖ್ಯವಾಗಿರುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ವಸತಿ ಶಾಲೆಯ ಇಕೊ ಕ್ಲಬ್ ವತಿಯಿಂದ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ** ಸಹಯೋಗದಲ್ಲಿ ದಿನಾಂಕ 18.7.2025 ರಂದು ಏರ್ಪಡಿಸಲಾಗಿದ್ದ ಸೀಡ್ ಬಾಲ್ ವಿತರಣಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು. ಶುದ್ಧವಾದ ಗಾಳಿ, ನೀರು, ಆಹಾರ ಸೇವಿಸಿದಾಗ ಮಾತ್ರ ಮನುಷ್ಯನು ಆರೋಗ್ಯದಿಂದ ಇರಲು ಸಾಧ್ಯ. ಪರಿಸರದಲ್ಲಿ ಅಸಮತೋಲನ ಉಂಟಾದರೆ, ಮನುಷ್ಯನ ಆರೋಗ್ಯ ಹದಗೆಟ್ಟು ಔಷಧಿಗಳನ್ನು ಆಶ್ರಯಿಸಬೇಕಾಗುತ್ತದೆ. ಔಷಧಿಗಳಿಲ್ಲದೆ ಬದುಕಬೇಕೆಂದರೆ ಪ್ರಕೃತಿಯನ್ನು



ಗುರುವಾಗಿ ಭಾವಿಸಿ, ಪೋಷಿಸಿ ಬೆಳೆಸಿದರೆ, ಮಾನವನ ಜೀವನಕ್ಕೆ ಉತ್ತಮವಾದ ಭವಿಷ್ಯವಿರುತ್ತದೆ. ಪ್ರತಿಯೊಬ್ಬರೂ ಸಸಿಯನ್ನು ಗಿಡವನ್ನು ನೆಟ್ಟು ಪೋಷಿಸಿದರೆ ಅದು ದೇಶಕ್ಕೆ ನೀಡುವ ದೊಡ್ಡ ಕೊಡುಗೆ ಎಂದು ಹೇಳಿದರು.

ಶಾಸಕರು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಮಾತನಾಡಿ, ಇಂದಿನ ದಿನಗಳಲ್ಲಿ ಪರಿಸರವು ನಾಶವಾಗುತ್ತಿರುವುದರಿಂದ ಜಾಗತಿಕ ತಾಪಮಾನವು ಏರಿಕೆಯಾಗುತ್ತಿದೆ. ಇದರಿಂದ ಮಾನವ ಕುಲಕ್ಕೆ ಅನೇಕ ಸಮಸ್ಯೆಗಳು ಉಂಟಾಗುತ್ತಿದೆ. ದಿನನಿತ್ಯದ ಜೀವನದಲ್ಲಿ ಪ್ಲಾಸ್ಟಿಕ್ ಬಳಸುವುದನ್ನು ಕಡಿಮೆ ಮಾಡಬೇಕು. ಇದು ಪರಿಸರಕ್ಕೆ ಮಾರಕವಾಗಿ ಪ್ರಾಣಿ–ಪಕ್ಷಿಗಳ ಸಂತತಿ ನಶಿಸುತ್ತಿದೆ. ವಿದ್ಯಾರ್ಥಿಗಳು ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಂಡು, ಪರಿಸರ ಸಂರಕ್ಷಣೆಯನ್ನು ಮಾಡುವಂತಹ ಪ್ರಜೆಗಳಾಗಬೇಕು. ಗಿಡಮರಗಳನ್ನು ಬೆಳೆಸಿ, ಪ್ರಕೃತಿ ಮಾತೆಯನ್ನು ಉಳಿಸಬೇಕಾದಂತಹ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಪರಿಸರ ದಿನಾಚರಣೆಯು ಒಂದೇ ದಿನಕ್ಕೆ ಸೀಮಿತವಾಗದೆ ವರ್ಷವಿಡೀ ಗಿಡಗಳನ್ನು ನೆಡುವುದರ ಮೂಲಕ ಪ್ರಕೃತಿ ಮಾತೆಗೆ ಗೌರವವನ್ನು ಸೂಚಿಸಬೇಕು ಎಂದರು.

ಲೋಕಸಭಾ ಸದಸ್ಯರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು, ಸುತ್ತೂರು ಶ್ರೀಮಠವು ಅಕ್ಷರ, ಆರೋಗ್ಯ, ಅನ್ನ ದಾಸೋಹದ ಜೊತೆಗೆ ಇಂತಹ ಪರಿಸರ ಸಂರಕ್ಷಣೆಯಂತಹ ಕಾರ್ಯಕ್ರಮವನ್ನು ಏರ್ಪಡಿಸುತ್ತಿರುವುದು ತುಂಬಾ ಸಂತೋಷದ ಸಂಗತಿ. ಗಿಡಗಳನ್ನು ನೆಡುವುದರಿಂದ ಪ್ರಕೃತಿ ವಿಕೋಪಗಳಿಂದ ಉಂಟಾಗುವಂತಹ ಅನಾಹುತಗಳನ್ನು ತಡೆಗಟ್ಟಬಹುದು. ಸುತ್ತೂರು ಶ್ರೀಮಠಕ್ಕೂ ಮೈಸೂರು ಅರಮನೆಗೂ ಅವಿನಾಭಾವ ಸಂಬಂಧವಿದೆ. ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಜನುಮ ದಿನದಂದು ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನ್ನ ಪುಣ್ಯ ಎಂದರು.

ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಮಾತನಾಡಿ ಮನುಷ್ಯನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು

ನಾಶವಾಡುತ್ತಿದ್ದಾನೆ. ಅಭಿವೃದ್ಧಿಯ ಹೆಸರಿನಲ್ಲಿ ಕಾಡುಗಳನ್ನು ನಾಶ ಮಾಡುತ್ತಿರುವುದರಿಂದ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾನೆ. ಆದ್ದರಿಂದ ಪರಿಸರವನ್ನು ರಕ್ಷಣೆ ಮಾಡಿ ಸಂಕಷ್ಟದಿಂದ ಪಾರಾಗಬೇಕು. ಎಲ್ಲರೂ ಗಿಡಗಳನ್ನು ನೆಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೀದರ್ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆರವರು, ಮೈಸೂರು ಗ್ರಾಮಾಂತರ ಬಿಜೆಪಿಯ ಅಧ್ಯಕ್ಷರಾದ ಶ್ರೀ ಸುಬ್ಬಣ್ಣರವರು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳು, ಮುಖ್ಯಸ್ಥರುಗಳು, ನೌಕರ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಕೀಲರು ಹಾಗೂ ಕಲಾವಿದರಾದ ಶ್ರೀಮತಿ ಮಾಳವಿಕಾ ಅವಿನಾಶ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಸೀಡ್ ಬಾಲ್‌ಗಳನ್ನು ವಿತರಿಸಲಾಯಿತು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಜಿ. ಶಿವಸ್ವಾಮಿ ಸ್ವಾಗತಿಸಿದರು. ಕು. ಹೆಚ್.ಎಂ. ಸವಿತಾ ವಂದಿಸಿದರು. ಶ್ರೀ ಎಸ್. ಚಂದ್ರಮೌಳೇಶ್ವರ ಕಾರ್ಯಕ್ರಮ ನಿರೂಪಿಸಿದರು.

---

## ಪ್ರಯತ್ನ ಮತ್ತು ಪರಿಶ್ರಮ ಯಶಸ್ಸಿನ ಮೈಲಿಗಲ್ಲು

ಸತತ ಪ್ರಯತ್ನ ಮತ್ತು ಕಠಿಣ ಪರಿಶ್ರಮದಿಂದ ಯಶಸ್ಸು ಗಳಿಸಬಹುದು ಎಂದು ಹೈದರಾಬಾದ್ ಯುಎಸ್‌ಪಿ ಇಂಡಿಯಾದ ಸೈಟ್ ಆಪರೇಶನ್ಸ್‌ನ ಹಿರಿಯ ಉಪಾಧ್ಯಕ್ಷರಾದ ಡಾ. ಗಿರೀಶ್ ಕಪೂರ್‌ರವರು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 1.7.2025 ರಂದು ನಡೆದ **ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ** ಪದವೀಧರರ 'ಸಮಾವರ್ತನ' ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಯಶಸ್ಸಿಗೆ ಯಾವುದೇ ಅಡ್ಡದಾರಿ ಇರುವುದಿಲ್ಲ. ದಿಢೀರನೆ ಗಳಿಸಿದ ಯಶಸ್ಸು ಬಹಳ ದಿನ ಉಳಿಯುವುದಿಲ್ಲ. ಈ ಕಾರಣದಿಂದಾಗಿ ಕಠಿಣ ಅಧ್ಯಯನ ಅಗತ್ಯ. ಇದರೊಂದಿಗೆ ಗುರಿ ನಿಖರವಾಗಿರಬೇಕು. ವಿದ್ಯಾರ್ಥಿಗಳು ಜೀವನದಲ್ಲಿ ಆತ್ಮಸ್ಥೈರ್ಯ ರೂಢಿಸಿಕೊಳ್ಳಬೇಕು. ಸಿಗುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಜ್ಞಾನ ಹೆಚ್ಚಿಸಿಕೊಳ್ಳಬೇಕು. ಔಷಧ ವಿಜ್ಞಾನ ಕ್ಷೇತ್ರ ಒಂದು ಜವಾಬ್ದಾರಿಯುತ ಪ್ರಪಂಚ. ಇದರ ಮಹತ್ವ ಅರಿತು ಮುನ್ನಡೆಯಬೇಕು. ಸಂಶೋಧನೆ ನಡೆಸಿ, ಆವಿಷ್ಕಾರ ಮಾಡಿ ಹೊಸ ಔಷಧಿಗಳ ಸಂಯುಕ್ತ ಮಿಶ್ರಣ ಕಂಡು ಹಿಡಿಯಬಹುದು. ಆದರೆ ಇವುಗಳು ಅಂತಿಮವಾಗಿ ಮನುಷ್ಯರ ಒಳಿತಾಗಿ ಉಪಯೋಗವಾಗುತ್ತವೆ ಎನ್ನುವ ಅರಿವು ಹೊಂದಬೇಕು. ಆದ್ದರಿಂದ ಬಹಳ ಜಾಗರೂಕತೆಯಿಂದ ಅಭ್ಯಾಸ ಮಾಡಬೇಕು. ಆಧುನಿಕ ತಂತ್ರಜ್ಞಾನದ ಕೌಶಲ ರೂಢಿಸಿಕೊಳ್ಳಬೇಕು. ಔಷಧ ವಿಜ್ಞಾನ ಕ್ಷೇತ್ರ ಫಲಿತಾಂಶ ಆಧಾರಿತವಾದ ವಲಯ ಆಗಿರುವುದರಿಂದ ತರಬೇತಿ ಬಹಳ ಮುಖ್ಯ ಎಂದು ಹೇಳಿದರು.

ಒಟ್ಟು 267 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ ಔಷಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಾಲೇಜಿನ ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಸಿ.ಜಿ. ಬೆಟಸೂರಮಠ, ಕುಲಪತಿಗಳಾದ ಡಾ. ಎಚ್. ಬಸವನಗೌಡಪ್ಪ, ಕುಲಸಚಿವರಾದ ಡಾ. ಬಿ. ಮಂಜುನಾಥ ಉಪಸ್ಥಿತರಿದ್ದರು. ಡಾ. ಟಿ.ಎಂ. ಪ್ರಮೋದ್‌ಕುಮಾರ್ ಸ್ವಾಗತಿಸಿದರು. ಡಾ, ಆರ್. ಸುಧೀಂದ್ರ ಭಟ್ ಪ್ರತಿಜ್ಞಾವಿಧಿ ಬೋಧಿಸಿದರು. ಕು. ಜ್ಯೋಥಿಸ್ ಮತ್ತು ಕು. ಜ್ಯುವೆಲ್ ಪ್ರಾರ್ಥಿಸಿದರು. ಡಾ. ಜಿ.ವಿ. ಪೂಜಾರ್ ವಂದಿಸಿದರು.

## ಸದೃಢ ಸಮಾಜಕ್ಕೆ ಆರೋಗ್ಯವಂತ ವ್ಯಕ್ತಿಗಳ ಅಗತ್ಯವಿದೆ




ಸದೃಢ ಸಮಾಜಕ್ಕೆ ಆರೋಗ್ಯವಂತ ವ್ಯಕ್ತಿಗಳ ಅಗತ್ಯವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

**ಗುಂಡ್ಲುಪೇಟೆಯ ಜೆಎಸ್‌ಎಸ್ ಅನುಭವ ಮಂಟಪದಲ್ಲಿ** ದಿನಾಂಕ 25.7.2025 ರಂದು ಆಯೋಜಿಸಿದ್ದ 21ನೇ ಮದ್ಯವರ್ಜನ ಶಿಬಿರ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು. ಯುವಜನರು ದುಶ್ಚಟಗಳಿಗೆ ಬಲಿಯಾಗುತ್ತಿರುವುದು ವಿಷಾದನೀಯ ಸಂಗತಿ. ದುಶ್ಚಟಗಳಿಗೆ ಒಳಗಾಗುವವರು ವೈಯಕ್ತಿಕ ಗೌರವದ ಜೊತೆಗೆ ಕುಟುಂಬದ ಗೌರವವನ್ನು ಹಾಳು ಮಾಡುತ್ತಿದ್ದಾರೆ. ದುಶ್ಚಟಗಳಿಂದ ದೂರವಿರಬೇಕು. ಇಂತಹ ಶಿಬಿರಗಳನ್ನು ಏರ್ಪಡಿಸುತ್ತಿರುವುದರಿಂದ ಶೇ 30ರಿಂದ 40ರಷ್ಟು ಸುಧಾರಣೆ ಸಾಧ್ಯವಾಗಿದೆ. ಸಾಕಷ್ಟು ಜನ ಮದ್ಯಪಾನದಂತಹ ದುಶ್ಚಟಗಳಿಂದ ಹೊರಬಂದು ಕುಟುಂಬದವರೊಂದಿಗೆ ಉತ್ತಮ ಜೀವನ ನಡೆಸುತ್ತಿದ್ದಾರೆ ಎಂದು ಹೇಳಿದರು.

ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್‌ರವರು, ಹಾಲಹಳ್ಳಿಯ ಸಂಗಮ ಪ್ರತಿಷ್ಠಾನವು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ಜೆಎಸ್‌ಎಸ್ ಸಂಸ್ಥೆ ಆಯೋಜಿಸುವ ಮದ್ಯವರ್ಜನ ಶಿಬಿರಕ್ಕೆ ನೆರವಾಗುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರ ನೀಡುತ್ತಿದೆ. ಈ ಬಗ್ಗೆ ಸಮಾಜ ಸಹ ಕಾಳಜಿ ತೋರಿಸಬೇಕು ಎಂದರು.

ಪರಂಪರೆ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಪಿ. ಕೃಷ್ಣಕುಮಾರ್‌ರವರು ಕುಡಿತಕ್ಕೆ ನಾನಾ ನೆಪಗಳಿರುತ್ತವೆ. ನಾನು 41 ವರ್ಷದ ಹಿಂದೆಯೇ ವ್ಯಸನಮುಕ್ತನಾಗಿದ್ದೇನೆ. ಪ್ರತಿ ವ್ಯಸನಿಯೂ ಆತ್ಮಾವಲೋಕನ ಮಾಡಿಕೊಳ್ಳುವ ಮೂಲಕ ವ್ಯಸನಗಳಿಂದ ದೂರವಿರಬೇಕು. ಕುಡಿತದಿಂದ ದೂರವಿದ್ದ ಪ್ರತಿವರ್ಷವೂ ಅವರ ಹುಟ್ಟುಹಬ್ಬವಿದ್ದಂತೆ ಎಂದು ಹೇಳಿದರು.

ಚಿಕ್ಕತುಪ್ಪೂರು ಶ್ರೀಗಳು, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ನಗರಸಭೆ ಅಧ್ಯಕ್ಷರಾದ ಶ್ರೀ ಜಿ.ಎನ್. ಮಧುಸೂದನ್, ಶ್ರೀ ಹೆಚ್.ಎಸ್. ನಂಜಪ್ಪ ಉಪಸ್ಥಿತರಿದ್ದರು. ಶ್ರೀ ಬಂಗಾರ ನಾಯಕ ಪ್ರಾರ್ಥಿಸಿದರು. ಶ್ರೀ ಹೆಚ್.ಎಸ್. ರಾಜಶೇಖರಪ್ಪ ಸ್ವಾಗತಿಸಿದರು. ಶ್ರೀ ಎಸ್. ಬಸವರಾಜು ವರದಿ ಮಂಡಿಸಿದರು. ಶಿಬಿರಾರ್ಥಿಗಳಾದ ಶ್ರೀ ಪೂರ್ಣಕ್ರಾಂತಿ, ಶ್ರೀ ಹೆಚ್.ಪಿ. ರಘು, ಶ್ರೀ ತ್ರಿಶಂಕಕುಮಾರ್, ಶ್ರೀ ನಂದಕುಮಾರ್‌ರವರುಗಳು ಅನಿಸಿಕೆ ಹಂಚಿಕೊಂಡರು. ಶ್ರೀ ಎಂ.ಸಿ. ಮಂಜುನಾಥ್ ವಂದಿಸಿದರು. ಡಾ. ಎಂ.ಪಿ. ಸೋಮಶೇಖರ್ ಕಾರ್ಯಕ್ರಮ ನಿರೂಪಿಸಿದರು.

## ಶಿಕ್ಷಕರು ನಿರಂತರ ಕಲಿಕೆಯುಳ್ಳವರು



ಶಿಕ್ಷಕರಿಗೆ ಪ್ರತಿಯೊಂದು ವಿಷಯದಲ್ಲೂ ಜ್ಞಾನವಿರಬೇಕು. ಸದಾ ಕಲಿಕೆಯ ಕುರಿತಂತೆ ಮಾರ್ಗದರ್ಶನ ನೀಡುತ್ತಾ ಪ್ರೋತ್ಸಾಹಿಸುವ ಮೂಲಕ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಕ್ಷಮಿಸಿ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ ಜಿ. ಬೆಟಸೂರಮಠರವರು ತಿಳಿಸಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 19.7.2025ರಂದು ನಡೆದ ಒಂದು ದಿನದ 'ಶಿಕ್ಷಕರ ಸಾಮರ್ಥ್ಯ ನಿರ್ಮಾಣ' ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಕರು ಸಂಪಾದಿಸಿದ ಜ್ಞಾನ ಮತ್ತು ಕೌಶಲ್ಯಗಳು ವಿದ್ಯಾರ್ಥಿಗಳಿಗೆ ಸಹಕಾರಿಯಾಗಲಿ. ಶಿಕ್ಷಕರು ಹೊಸ ಶೋಧನೆಗಳ ಕಡೆಗೆ ಗಮನಹರಿಸಿ ವಿದ್ಯಾರ್ಥಿಗಳಿಗೆ ನ್ಯಾಯವನ್ನು ಒದಗಿಸಬೇಕಿದೆ. ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲ ಗುಣವನ್ನು ಹೊಂದುವಂತೆ ಮಾಡಿ ನಾಯಕತ್ವದ ರೂಪ ನೀಡಬೇಕಿದೆ. ಶಿಕ್ಷಕರು ನಿರಂತರ ಕಲಿಕೆಯ ವಿದ್ಯಾರ್ಥಿತನದ ಗುಣವನ್ನು ಹೊಂದಿ, ಪರಿಪೂರ್ಣ ವ್ಯಕ್ತಿತ್ವ ವಿಕಾಸವಾಗಬೇಕೆಂದು ಸಲಹೆ ನೀಡಿದರು.

ಪೂಜಾ ಭಾಗವತ್ ಮೆಮೋರಿಯಲ್ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ. ಸಿ.ಕೆ. ರೇಣುಕಾರ್ಯ ಅವರು, ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಶಿಕ್ಷಕರು ವಿದ್ಯಾರ್ಥಿಗಳ ಕುತೂಹಲವನ್ನು ತಣಿಸುವ ಶಕ್ತಿ ಸಾಮರ್ಥ್ಯ ಗಳಿಸಿ ಮತ್ತು ನವೀನ ಸಂಶೋಧನೆಗಳಿಗೆ ಶಿಕ್ಷಕರು ಒಳಗೊಳ್ಳಬೇಕಿದೆ ಎಂದರು.

ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರು ಪರಮಪೂಜ್ಯ ರಾಜೇಂದ್ರ ಶ್ರೀಗಳವರು ತಮ್ಮ ಬದುಕಿನ ಉದ್ದಕ್ಕೂ ವೃತ್ತಿಪರ ನೈತಿಕತೆಯನ್ನು ಸಾಧಿಸಿದ್ದರು. ಜ್ಞಾನವೆಂದರೆ ವ್ಯಕ್ತಿಯನ್ನು ವಿನಯವಂತನಾಗಿಸುವುದು ಮತ್ತು ಶಿಕ್ಷಕರು ಭಾವನಾತ್ಮಕ ಪರವಶತೆಗೆ ಒಳಪಡಬೇಕಿದೆ ಎಂದರು. 'ವೃತ್ತಿಪರ ನೈತಿಕತೆ' ಕುರಿತಂತೆ ಉಪನ್ಯಾಸ ನೀಡಿದ ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಮಹಾದೇವಪ್ಪರವರು 'ಗುಣಮಟ್ಟದ ಭರವಸೆ' ಕುರಿತು ಮೈಸೂರು ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್ ಕಾರ್ಯಾಚರಣೆಯ ಮುಖ್ಯಸ್ಥರಾದ ಡಾ. ಆರ್. ದತ್ತ ಕುಮಾರ್‌ರವರು

‘ಅನುಭವದ ಕಲಿಕೆ’ ಕುರಿತು ಮೈಸೂರು ವಿಶ್ವವಿದ್ಯಾನಿಲಯದ ಗಣಕವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಪ್ರೊ. ಡಿ. ಎಸ್. ಗುರುರವರು ‘ಬೋಧನೆ?’ ಕುರಿತು ಮಾತನಾಡಿದರು.

ಪ್ರಾಂಶುಪಾಲರಾದ ಡಾ. ರೇಚಣ್ಣನವರು, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಂ.ಎಸ್. ನಟರಾಜುರವರು ಉಪಸ್ಥಿತರಿದ್ದರು. ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಚೈತ್ರ ಪ್ರಾರ್ಥಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಆರ್.ಎಸ್. ಕುಮಾರ್ ಸ್ವಾಗತಿಸಿದರು. ಅಧ್ಯಾಪಕರಾದ ಶ್ರೀ ಎನ್.ಎಂ. ಕೃಷ್ಣಪ್ಪ ವಂದಿಸಿದರು. ಶ್ರೀ ಹೊನ್ನಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. □

## ಶಿಕ್ಷಣ ಜೀವನದ ದಾರಿದೀಪ



ಪದವಿಯಲ್ಲಿ ಪಡೆದುಕೊಂಡ ಜ್ಞಾನ ಜೀವನದ ದಾರಿದೀಪವಾಗಬಹುದು ಎಂದು ಮೈಸೂರಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ಪ್ರಾದೇಶಿಕ ನಿರ್ದೇಶಕರಾದ ಪ್ರೊ. ಟಿ.ಪಿ. ರೇಣುಕಾಮೂರ್ತಿಯವರು ಹೇಳಿದರು.

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 25.07.2025ರಂದು ಆಯೋಜಿಸಿದ್ದ ಪರಿಚಯಾತ್ಮಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿ ಜೀವನದಲ್ಲಿ ಪದವಿ ಹಂತ ಪ್ರಮುಖವಾಗಿದೆ. ಈಗ ವೃಥಾ ಕಾಲಹರಣ, ಕೆಟ್ಟ ಅಭ್ಯಾಸದಲ್ಲಿ ತೊಡಗಿ ಭವಿಷ್ಯದಲ್ಲಿ ಪಶ್ಚಾತ್ತಾಪ ಪಡಬಾರದು. ಸಮಾಜದಲ್ಲಿ ಎತ್ತರಕ್ಕೆ ಬೆಳೆಯುವ ಗುರಿ ಹೊಂದಿ ನಿತ್ಯ ಹೆಚ್ಚು ಸಮಯ ಅಭ್ಯಾಸದ ಕಡೆಗೆ ಗಮನಹರಿಸಬೇಕು. ಉನ್ನತ ಶಿಕ್ಷಣದಲ್ಲಿ ಕಲಿಕೆಗೆ ಹೆಚ್ಚು ಪ್ರಾಧಾನ್ಯತೆಯಿದ್ದು, ವಿದ್ಯಾರ್ಥಿಗಳು ಸೃಜನಾತ್ಮಕತೆ, ಉತ್ಸಾಹ, ಉತ್ತಮ ವ್ಯಕ್ತಿತ್ವ ಬೆಳೆಸಿಕೊಂಡಲ್ಲಿ ಸಾಧನೆ ಸಾಧ್ಯವಿದೆ, ಬದಲಾವಣೆಯ ಪರ್ವದಲ್ಲಿ ಪ್ರತಿಯೊಬ್ಬರಿಗೂ ಪ್ರಪಂಚದ ಜ್ಞಾನ ಅನಿವಾರ್ಯವಾಗಿದೆ ಎಂದರು.

ಪ್ರಾಚಾರ್ಯರಾದ ಡಾ. ಹೆಚ್.ಎಸ್. ಕೊಂಗಳಪ್ಪನವರು, 1983ರಲ್ಲಿ ಪೂಜ್ಯಶ್ರೀ ರಾಜೇಂದ್ರ ಮಹಾಸ್ವಾಮೀಜಿಯವರ ಆಶಯದಂತೆ ಕೊಳ್ಳೇಗಾಲದಲ್ಲಿ ನಮ್ಮ ಮಹಿಳಾ ಕಾಲೇಜು ಸ್ಥಾಪನೆಯಾಗಿ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸದೃಢತೆಯ ಧ್ಯೇಯೋದ್ದೇಶದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಕಾಲೇಜಿನಲ್ಲಿರುವ ಸೌಲಭ್ಯಗಳನ್ನು ಬಳಸಿಕೊಂಡು ಸರ್ವಾಂಗೀಣ ಅಭಿವೃದ್ಧಿ ಹೊಂದಬೇಕು ಎಂದು ಹೇಳಿದರು.

## ಬ್ಯೂಟೀಷಿಯನ್ ಪ್ರಾತ್ಯಕ್ಷಿಕೆ ಚಟುವಟಿಕೆ




**ಬೆಂಗಳೂರಿನ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯಲ್ಲಿ** ದಿನಾಂಕ 19.7.2025ರಂದು ಸ್ಕಿಲ್ ಇಂಡಿಯಾ 10ನೇ ವರ್ಷದ ಪ್ರಯುಕ್ತ ಕಲಿಕಾರ್ಥಿಗಳಿಗೆ ಕೌಶಲ ಪರೀಕ್ಷಿಸುವ ಸಲುವಾಗಿ ಬ್ಯೂಟೀಷಿಯನ್ ಪ್ರಾತ್ಯಕ್ಷಿಕೆ ಚಟುವಟಿಕೆ ಹಮ್ಮಿಕೊಳ್ಳಲಾಗಿತ್ತು. ಕಲಿಕಾರ್ಥಿಗಳು ವಿವಿಧ ನಮೂನೆಯ ಕೇಶ ವಿನ್ಯಾಸ, ಸ್ಯಾರಿವೇರ್‌ಗಳನ್ನು ಪ್ರಾಯೋಗಿಕವಾಗಿ ತೋರಿಸಿದರು. ವೃತ್ತಿಬೋಧಕರಾದ ಶ್ರೀಮತಿ ಪದ್ಮ, ಶ್ರೀಮತಿ ಆರತಿರವರು ಕಲಿಕಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಉತ್ತಮವಾಗಿ ಕೌಶಲ ಪ್ರದರ್ಶಿಸಿದವರಿಗೆ ಪ್ರೋತ್ಸಾಹ ನೀಡಲು ಪ್ರಥಮ, ದ್ವಿತೀಯ, ತೃತೀಯ ಎಂದು ಪರಿಗಣಿಸಿ ಬಹುಮಾನ ವಿತರಿಸಲು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ನಿರ್ದೇಶಕರಾದ ಶ್ರೀಮತಿ ಡಿ.ಎಂ. ಶಶಿಕಲಾರವರು, ಸಿಬ್ಬಂದಿ, ಕಲಿಕಾರ್ಥಿಗಳು ಭಾಗವಹಿಸಿದ್ದರು.

ಮಮಕಾರದಳಿಸಿಕೆಯೆ ಶಿವಭಕ್ತಿಪಾರಮ್ಯ;
ಕಾರುಣ್ಯದಪ್ಪುಗೆಯೆ ನಿಜ ಸಾಮರಸ್ಯ.
ಈ ಭಾವಮಡಿಯಿಂದ ಮನುಜಮನ ಪಾವಿತ್ರ್ಯ;
ರಾಜೇಂದ್ರ ನೆನಪೊಂದು ಸ್ಫೂರ್ತಿ ಸಂದೇಶ.

**– ಕೆ.ಸಿ. ಶಿವಪ್ಪ**

## ಪದವಿಯೊಂದಿಗೆ ಕೌಶಲ್ಯ ಹೊಂದಿದಲ್ಲಿ ವಿದ್ಯಾರ್ಥಿಗಳ ಯಶಸ್ಸು ಸಾಧ್ಯ




ವಿದ್ಯಾರ್ಥಿಗಳು ಹೆಚ್ಚೆಚ್ಚು ಕೌಶಲ್ಯಗಳನ್ನು ಹೊಂದುವ ಮೂಲಕ ಪ್ರಬುದ್ಧತೆಯನ್ನು ಗಳಿಸಿಕೊಂಡು ತಂತ್ರಜ್ಞಾನದಲ್ಲಿ ಬೆಳವಣಿಗೆ ಸಾಧಿಸಿ ಎಂದು ಐಎಲ್‌ವೈಎಫ್ ನ ಅಧ್ಯಕ್ಷರಾದ ಡಾ. ಎಂ. ಧರ್ಮಪ್ರಸಾದ್ ತಿಳಿಸಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಕೋಶದ ವತಿಯಿಂದ ಅಂತಾರಾಷ್ಟ್ರೀಯ ಲಿಂಗಾಯತ್ ಯುವ ಸಮಿತಿಯ ಸಹಯೋಗದಲ್ಲಿ ದಿನಾಂಕ 22.7.2025ರಂದು ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಕೌಶಲ್ಯ, ಅಕೌಂಟ್, ಟ್ಯಾಲಿ ಎಲ್ಲವನ್ನು ತಿಳಿದುಕೊಂಡು ಉದ್ಯೋಗ ಹೊಂದಿ ಹೊಸ ಉದ್ಯಮಗಳನ್ನು ತೆರೆಯಬೇಕು. ಆ ಮೂಲಕ ನೀವು ಬೇರೆಯವರಿಗಿಂತ ಭಿನ್ನತೆ ದೃಷ್ಟಿ ಹೊಂದಿ ಬೆಳವಣಿಗೆ ಸಾಧಿಸಿರಿ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಭಾಗವಹಿಸಿದ ಮೈಸೂರಿನ ಸಹಾಯಕ ಪೊಲೀಸ್ ಆಯುಕ್ತರಾದ ಹೆಚ್. ಎಂ. ಚಂದ್ರಶೇಖರ್ ಅವರು, ಪ್ರತಿಯೊಂದು ಹುದ್ದೆಗೆ ಪ್ರಾತಿನಿಧ್ಯವಿದೆ. ತಾವುಗಳು ದೃಢವಾದ ವಿಶ್ವಾಸದಿಂದ ಸ್ಪರ್ಧಾತ್ಮಕ ಪರೀಕ್ಷೆ ಕಡೆಗೆ ತಯಾರಿ ನಡೆಸಿ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ರೇಚಣ್ಣನವರು, ಐಎಲ್‌ವೈಎಫ್‌ನ ಶ್ರೀ ಕೆ.ಎಸ್. ಮಹದೇವ್ ಪ್ರಸಾದ್, ಶ್ರೀ ಕೆ.ಹೆಚ್. ಕಿರಣ್ ಹಾಗೂ ಉದ್ಯೋಗ ಕೋಶದ ಸಂಚಾಲಕರಾದ ಶ್ರೀ ವಿ. ಉಮೇಶ್ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಲೋಕವಿಕೃತ ಶ್ರೀ ಮಹಾ ಸು
ತ್ತೂರು ವೀರಪರಂಪರೆಗೆ ತೊಳೆ
ತೊಳೆದ ಕಳಸವನೇರಿಸಿದ ಶಿವರಾತ್ರಿ ರಾಜೇಂದ್ರ
ಪ್ರಭುವೆ, ಕಾಯಕ ತನುವ ಧರಿಸಿದ
ತೆರದಿ ಮೆರೆದಿರಿ! ನಿಮಗೆ ಹೋಲಿಕೆ
ಯಾರು, ಯೋಗಿಯೇ?
ನಿಮ್ಮ ಪದಪಂಕೇರುಹಕೆ ಶರಣು

– **ಕೃಷ್ಣಕುಮಾರ್** ಸಿ.ಪಿ.

## ಶರಣರ ಆದರ್ಶದ ಬದುಕು ನಮ್ಮದಾಗಬೇಕು




ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ನಡೆದ 327ನೇ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ 'ಶರಣರ ವಿಚಾರಧಾರೆ' ವಿಷಯ ಕುರಿತು ಸಾಹಿತಿ ಶ್ರೀ ನಗರ್ಲೆ ಶಿವಕುಮಾರರವರು ಮಾತನಾಡಿದರು. ಪ್ರೊ. ಸಿ.ಬಿ. ಬಸವರಾಜುರವರಿದ್ದಾರೆ. (26 ಜುಲೈ 2025)

ಶರಣರ ಆದರ್ಶದ ಬದುಕು ನಮ್ಮದಾಗಬೇಕು ಎಂದು ಸಾಹಿತಿಗಳಾದ ಶ್ರೀ ನಗರ್ಲೆ ಶಿವಕುಮಾರರವರು ಹೇಳಿದರು.

**ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ** ದಿನಾಂಕ 26.7.2025 ರಂದು ಏರ್ಪಡಿಸಿದ್ದ 327ನೆಯ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ 'ಶರಣರ ವಿಚಾರಧಾರೆ' ವಿಷಯ ಕುರಿತು ಅವರು ಮಾತನಾಡಿದರು. 12ನೆಯ ಶತಮಾನದ ಬಸವಾದಿ ಶರಣರನ್ನು ಕುರಿತು ಹರಿಹರ, ಪಾಲ್ಕುರಿಕೆ ಸೋಮನಾಥ, ಭೀಮಕವಿ, ಷಡಕ್ಷರಕವಿ ಸೇರಿದಂತೆ ಹಲವಾರು ಕವಿಗಳು ಕಾವ್ಯವನ್ನು ರಚಿಸಿದ್ದಾರೆ. ಕಲ್ಯಾಣ ಕ್ರಾಂತಿಯ ನಂತರ ವಚನ ಸಾಹಿತ್ಯ ಬೆಳಕಿಗೆ ಬರಲಿಲ್ಲ. 15ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲಕ್ಕೆ 101 ವಿರಕ್ತರು ಅಂದಿಗೆ ದೊರೆತ ವಚನಗಳನ್ನು ಪ್ರಕಟಪಡಿಸಿದರು. 16ನೆಯ ಶತಮಾನದಲ್ಲಿ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳ ಕಾಲದಲ್ಲಿ ವಚನ ಸಾಹಿತ್ಯದ ದ್ವಿತೀಯ ಘಟ್ಟ ಆರಂಭವಾಯಿತು. ಅದಾದ ನಂತರ 20ನೆಯ ಶತಮಾನದ ಆದಿಭಾಗದಲ್ಲಿ ಡಾ. ಫ.ಗು. ಹಳಕಟ್ಟಿಯವರು "ಶಿವಾನುಭವ ಪತ್ರಿಕೆ" ಮೂಲಕ ವಚನಗಳನ್ನು ಪ್ರಕಟಿಸಿದರು. 250ಕ್ಕೂ ಹೆಚ್ಚು ವಚನಕಾರರು 22,000ಕ್ಕಿಂತಲೂ ಹೆಚ್ಚಿನ ವಚನಗಳನ್ನು ರಚಿಸಿರುವುದನ್ನು ಹಾಗೂ ಇವೆಲ್ಲವುಗಳನ್ನು ಕನ್ನಡ ಸಂಸ್ಕೃತಿ ಇಲಾಖೆಯು ಪ್ರಕಟಿಸಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಕನ್ನಡ ಸಾಹಿತ್ಯಕ್ಕೆ ವಚನದ ಸಾಹಿತ್ಯದ ಕೊಡುಗೆ ಅಪಾರ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತಿರುವುದು ವಚನ ಸಾಹಿತ್ಯದ ಬಳುವಳಿ ಎನ್ನಬಹುದು. ಕಾಯಕ ಮತ್ತು ದಾಸೋಹಕ್ಕೆ ಮಹತ್ವವನ್ನು ಕೊಟ್ಟ ಬಸವಾದಿ ಶರಣರು ನುಡಿದಂತೆ ನಡೆದು ತೋರಿಸಿದರು. ಮೋಳಿಗೆ ಮಾರಯ್ಯ, ಮಾದಾರ ಧೂಳಯ್ಯ, ಉರಿಲಿಂಗಪೆದ್ದಿ, ನಗೆಯ ಮಾರಿತಂದೆ, ಮೇದರ ಕೇತಯ್ಯ, ಮಡಿವಾಳ ಮಾಚಯ್ಯ ಹೀಗೆ ವಿವಿಧ ಶರಣರ ವಿಚಾರಗಳು ಬದುಕಿಗೆ ಮಾರ್ಗದರ್ಶಕ ಎಂದರು.

ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಸಿ.ಬಿ. ಬಸವರಾಜುರವರು ಅಧ್ಯಕ್ಷತೆ ವಹಿಸಿದ್ದರು. ಕು. ಚೂಡಾಮಣಿ ಮತ್ತು ಶ್ರೀ ನಟರಾಜು ವಚನ ಗಾಯನವನ್ನು ನಡೆಸಿಕೊಟ್ಟರು. ಶ್ರೀಮತಿ ಎ.ಜಿ. ಭವಾನಿ ಹಾಗೂ ಶ್ರೀ ಎಂ. ಶಿವಪ್ರಸಾದ್‌ರವರು ಪ್ರಾಯೋಜಕತ್ವ ವಹಿಸಿದ್ದರು.

ಶ್ರೀಮತಿ ಎ.ಜಿ. ಭವಾನಿಯವರು ಸ್ವಾಗತಿಸಿದರು. ಶ್ರೀಮತಿ ಎಂ.ಎ. ನೀಲಾಂಬಿಕಾರವರು ವಂದಿಸಿದರು. ಶ್ರೀಮತಿ ಪಲ್ಲವಿಯವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ನಾಗರಿಕರು, ಜಿಜ್ಞಾಸುಗಳು ಭಾಗವಹಿಸಿದ್ದರು.

## ಜನಸಂಖ್ಯೆ ವರವೂ ಹೌದು, ಶಾಪವೂ ಹೌದು




ದೇಶವನ್ನು ರೂಪಿಸುವಲ್ಲಿ ಜನಸಂಖ್ಯೆಯು ಮಹತ್ವದ ಪಾತ್ರ ವಹಿಸುತ್ತದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ಅಧ್ಯಾಪಕರಾದ ಪ್ರೊ. ಎಚ್. ಆರ್. ಜಯಪಾಲ್‌ರವರು ಹೇಳಿದರು.

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 11.7.2025 ರಂದು ನಡೆದ 'ವಿಶ್ವ ಜನಸಂಖ್ಯಾ ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜನಸಂಖ್ಯೆ ಎನ್ನುವುದು ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಇರುವುದಿಲ್ಲ. ಜನಸಂಖ್ಯೆ ಹೆಚ್ಚಳವು ಪರಿಸರದಲ್ಲಿ ಏರುಪೇರು ಉಂಟುಮಾಡುತ್ತದೆ ಇಂತಹ ಕಾರಣದಿಂದಾಗಿ ಪ್ರಾಕೃತಿಕ ವಿಕೋಪಗಳು ಕಾಲಕ್ರಮೇಣ ಹೆಚ್ಚಾಗುತ್ತವೆ. ಜನಸಂಖ್ಯೆ ಕೆಲವು ರಾಷ್ಟ್ರಗಳಿಗೆ ವರವಾದರೆ ಕೆಲವೊಂದು ದೇಶಗಳಿಗೆ ಶಾಪವಾಗಿದೆ. ಜನಸಂಖ್ಯೆಯ ನಿಯಂತ್ರಣದಲ್ಲಿ ಶಿಕ್ಷಣವು ಅತಿ ಮುಖ್ಯ ಪಾತ್ರವಹಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ಪ್ರಾಂಶುಪಾಲರಾದ ಡಾ. ರೇಚಣ್ಣ, ಯುಥ್ ರೆಡ್ ಕ್ರಾಸ್ ಸಂಚಾಲಕರಾದ ಶ್ರೀಮತಿ ಎನ್. ನಾಗಲಾಂಬಿಕೆ, ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಡಾ. ಧರ್ಮೇಶ್ ಆಸೀನರಾಗಿದ್ದರು.

ಸಮಿತಿಯ ಸದಸ್ಯರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಎನ್. ನಾಗಲಾಂಬಿಕೆ ಸ್ವಾಗತಿಸಿದರು. ಡಾ. ಎ.ಜಿ. ಧರ್ಮೇಶ ವಂದಿಸಿದರು. ಕು. ಧಾತ್ರಿ ಮತ್ತು ಅವರ ತಂಡವು ಪ್ರಾರ್ಥನೆ ಸಲ್ಲಿಸಿತು. ಶ್ರೀಮತಿ ಅನುಷಾ ಕಾರ್ಯಕ್ರಮ ನಿರೂಪಿಸಿದರು.

## ಗುರು ನಿಜವಾದ ಸೃಷ್ಟಿಕರ್ತ ಮತ್ತು ಪೋಷಕ – ಡಾ. ಸಿ.ಜಿ. ಬೆಟಸೂರಮಠ




ಗುರುವೇ ನಿಜವಾದ ದೇವರು ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ. ಜಿ. ಬೆಟಸೂರಮಠರವರು ತಿಳಿಸಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 10.7.2025 ರಂದು ನಡೆದ 2025–26ನೇ ಸಾಲಿನ ದೀಕ್ಷಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಗೆ ಶಿಕ್ಷಣ ನೀಡುವುದರಿಂದ ಇಡೀ ಕುಟುಂಬಕ್ಕೆ ಶಿಕ್ಷಣ ದೊರೆಯುತ್ತದೆ. ಇಂದಿನ ಯುಗ ಆಯ್ಕೆಯ ಯುಗವಾಗಿದೆ. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಗುರಿ ಸಾಧಿಸಿ. ತಮ್ಮ ಜೀವನಶೈಲಿಯನ್ನು ಸುಧಾರಿಸಿಕೊಳ್ಳಬೇಕು. ನಿರಂತರವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಉತ್ತಮ ವ್ಯಕ್ತಿಗಳಾಗಿ ಬದುಕಬೇಕು ಎಂದು ಹಾರೈಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಸಿ. ನಾಗಣ್ಣನವರು ಮಾತನಾಡುತ್ತಾ, ಓದುವ ಸಂಸ್ಕೃತಿ ನಮ್ಮ ನಾಗರಿಕತೆಯ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಓದುವುದು ದೃಢವಾದ ಆತ್ಮವಿಶ್ವಾಸ, ವಿಮರ್ಶಾತ್ಮಕ ಚಿಂತನೆ ಮತ್ತು ಶಬ್ದಕೋಶವನ್ನು ಸುಧಾರಿಸುತ್ತದೆ. ವಿದ್ಯಾರ್ಥಿಗಳು ಓದುವ ಕಲೆ ಮತ್ತು ಬರೆಯುವ ಕಲೆಯನ್ನು ರೂಢಿಸಿಕೊಳ್ಳಿ. ಓದಿನ ಸಂಸ್ಕೃತಿ ಬೆಳೆಯಲು ಉತ್ತಮವಾದ ವಾತಾವರಣ ಬೇಕಾಗಿದೆ. ಇಂತಹ ವಾತಾವರಣ ಈ ಕಾಲೇಜಿನಲ್ಲಿದೆ ಎಂದು ಹೊಸ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು, ಜ್ಞಾನವನ್ನು ಹೆಚ್ಚಿಸಲು ಹಲವು ಮಾರ್ಗಗಳಿವೆ. ಪುಸ್ತಕಗಳ ಓದು ಮಾತ್ರ ನಿಮಗೆ ಈಗ ಮುಖ್ಯವಾಗಬೇಕು. ಓದುವುದು ಕುತೂಹಲ ಮತ್ತು ಅಜೀವ ಕಲಿಕೆಯನ್ನು ಬೆಳೆಸುತ್ತದೆ. 'ಗೊತ್ತಿಲ್ಲ' ಎಂಬುವ ಜನರನ್ನು 'ಗೊತ್ತಿದೆ' ಎನ್ನುವಂತೆ ಮಾಡುವುದೇ ನಿಜವಾದ ಶಿಕ್ಷಣ ಎಂದರು.

ಪ್ರಾಂಶುಪಾಲರಾದ ಡಾ. ರೇಚಣ್ಣನವರು, ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರು ಹಾಗೂ ಕಾರ್ಯಕ್ರಮದ ಸಂಚಾಲಕರಾದ ಡಾ. ಅಭಿಜಿತ್ ಎಂ. ಸಿಂಗ್ ಉಪಸ್ಥಿತರಿದ್ದರು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಶ್ರೀ ಆರ್.ಎಸ್. ಕುಮಾರ್ ಸ್ವಾಗತಿಸಿದರು. ಶ್ರೀ ಹೊನ್ನಶೆಟ್ಟಿಯವರು ವಂದನಾರ್ಪಣೆ ಮಾಡಿದರು. ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.

## ಶಿಕ್ಷಣ ಆತ್ಮವಿಶ್ವಾಸ ಬೆಳೆಸುವಂತಾಗಬೇಕು




**ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಆಂತರಿಕ ಗುಣಮಟ್ಟ ಭರವಸೆ ಘಟಕವು ರಾಜ್ಯ ಗುಣಮಟ್ಟ ಭರವಸೆ ಘಟಕದ ಸಹಯೋಗದೊಂದಿಗೆ ದಿನಾಂಕ 9.7.2025ರಂದು 'ಸ್ಟ್ರಾಟೆಜೀಸ್ ಫಾರ್ ಎನ್‌ಹ್ಯಾನ್ಸಿಂಗ್ ಕ್ವಾಲಿಟಿ ಅಂಡ್ ಎಕ್ಸಲೆನ್ಸ್ ಇನ್ ಹೈಯರ್ ಎಜುಕೇಷನ್' ಎಂಬ ವಿಷಯ ಕುರಿತಾದ ಒಂದು ದಿನದ ಪ್ರಾದೇಶಿಕ ಮಟ್ಟದ ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತರವರು ಶಿಕ್ಷಣದಲ್ಲಿ ಪೋಷಕರು ಸಾಕಷ್ಟು ವಿಚಾರಗಳನ್ನು ಕಲಿಯಬೇಕಾಗಿದೆ. ಶಿಕ್ಷಣ ಕೊಡಿಸುವಾಗ ಗೊಂದಲವಿದೆ. ಅಧ್ಯಾಪಕರು ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು. ಉನ್ನತ ಶಿಕ್ಷಣದ ಪಠ್ಯಕ್ರಮಗಳು ಉದ್ಯೋಗ ಸೃಷ್ಟಿಸಬೇಕು. ಆತ್ಮವಿಶ್ವಾಸ ಬೆಳೆಸಬೇಕೇ ಹೊರತು ಅಂಕಪಟ್ಟಿಗಳಿಗೆ ಸೀಮಿತವಾಗಬಾರದು. ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳು, ಉದ್ಯೋಗಾಧಾರಿತ ಶಿಕ್ಷಣವನ್ನು ಪಡೆಯಲು ಸಿದ್ಧರಾಗಿದ್ದಾರೆಯೇ ಹೊರತು ಉನ್ನತ ಶಿಕ್ಷಣವನ್ನಲ್ಲ ಎಂದರು.

ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ವಾಣಿಶ್ರೀ ಭಾರತ ದೇಶ ಅಭಿವೃದ್ಧಿ ಹೊಂದುತ್ತದೆ. ಇನ್ನೂ ಕೆಲವೇ ವರ್ಷಗಳಲ್ಲಿ ಅದು ಸಾಧ್ಯವಾಗುವುದು ಗುಣಮಟ್ಟದ ಶಿಕ್ಷಣದಿಂದ ಮಾತ್ರ. ಶಿಕ್ಷಣ ಎಂದರೆ ಪ್ರಕೃತಿ ಮತ್ತು ವ್ಯಕ್ತಿಯ ಸಮಗ್ರ ಬೆಳವಣಿಗೆಯೊಂದಿಗೆ ಬೆಸೆಯಬೇಕು ಎಂದು ರವೀಂದ್ರನಾಥ್ ಟ್ಯಾಗೂರ್‌ರವರು ನಂಬಿದ್ದರು. ಯುಜಿಸಿ ವಿದ್ಯಾರ್ಥಿಗಳಿಗೆ ಕೌಶಲ್ಯಾಧಾರಿತ ಗುಣಮಟ್ಟದ ಶಿಕ್ಷಣ, ಕಾಲೇಜಿನ ಅಭಿವೃದ್ಧಿ, ಸಂಶೋಧನೆ ಹಾಗೂ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡಿಕೊಟ್ಟಿದೆ ಎಂದು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ವೊರಬದ ಮಲ್ಲಿಕಾರ್ಜುನರವರು, ಅಧ್ಯಾಪಕರು ಸ್ವಯಂ ಶಿಸ್ತನ್ನು ಬೆಳೆಸಿಕೊಂಡು ಅಂತರಂಗವನ್ನು ಬಲಪಡಿಸಿಕೊಳ್ಳಬೇಕು. ಬಸವಣ್ಣನವರ ವಚನದಂತೆ ಬೆಲ್ಲದ ಪುತ್ಥಳಿಯಾಗಿರಬೇಕು.

'ಎನಗಿಂತ ಕಿರಿಯರಿಲ್ಲ, ನಿಮಗಿಂತ ಹಿರಿಯರಿಲ್ಲ' ಎನ್ನುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿ ಸ್ನೇಹಿತರಾಗಿ ಮಾನವೀಯ ಮೌಲ್ಯಗಳು ಹಾಗೂ ಉತ್ತಮ ನಾಗರಿಕ ಪ್ರಜ್ಞೆಯನ್ನು ಜಾಗೃತಗೊಳಿಸಬೇಕು. ವಿದ್ಯಾರ್ಥಿಗಳ ಅಂತರಂಗದಲ್ಲಿ ಸಾಮರ್ಥ್ಯ, ಜ್ಞಾನದ ಗುಣಮಟ್ಟವನ್ನು ವಿಕಾಸಗೊಳಿಸಬೇಕು ಎನ್ನುವ ಸ್ವಾಮಿ ವಿವೇಕಾನಂದರ ನುಡಿಗಳನ್ನು ಮನವ ಮಾಡಬೇಕು ಎಂದರು.

ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡರವರು ಯುಜಿಸಿ ನಿಯಮಾವಳಿಗಳು ವಿದ್ಯಾರ್ಥಿಗಳಲ್ಲಿ ಸ್ವಯಂ ಉದ್ಯೋಗದ ಜಾಗೃತಿಯನ್ನುಂಟು ಮಾಡಿ ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತಹ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆಯನ್ನು ನೀಡುತ್ತಿದೆ ಎಂದು ತಿಳಿಸಿದರು.

ಕಾರ್ಯಾಗಾರದ ಮೊದಲನೇ ಗೋಷ್ಠಿಯಲ್ಲಿ ಡಾ. ಬೆಂಗಳೂರಿನ ಎಸ್‌ಕ್ಯೂಎಸಿಯ ನೋಡಲ್ ಆಫೀಸರ್ ಕೆ. ವಿಕ್ರಂರವರು "ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಸುಧಾರಣೆಯ ನಿರಂತರತೆ" ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಆಂತರಿಕ ಗುಣಮಟ್ಟ ಭರವಸೆ ಘಟಕದ ಸಂಚಾಲಕರಾದ ಡಾ. ಬಿ.ಕೆ. ಕೆಂಡಗಣ್ಣಸ್ವಾಮಿ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ.ಎನ್. ಶಿವಕುಮಾರ್, ಅಧ್ಯಾಪಕರು, ಅಧ್ಯಾಪಕೇತರರು ಉಪಸ್ಥಿತರಿದ್ದರು. ಕು. ಕೀರ್ತನ ಮತ್ತು ಕು. ತೀರ್ಥನ ಪ್ರಾರ್ಥಿಸಿದರು. ಶ್ರೀಮತಿ ಎಂ.ಎಸ್. ದೀಪಾಲಿ ಸ್ವಾಗತಿಸಿದರು. ಶ್ರೀ ಹೆಚ್.ಎಸ್. ಪರಶಿವರವರು ವಂದನಾರ್ಪಣೆ ಮಾಡಿದರು. ಶ್ರೀಮತಿ ಎಂ.ಎನ್. ಜಯಶೀಲ ಕಾರ್ಯಕ್ರಮ ನಿರೂಪಿಸಿದರು.

## ವಿವಿಧ ಸಂಘಗಳ ಉದ್ಘಾಟನೆ

**ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ** ದಿನಾಂಕ 16.7.2025ರಂದು 2025-26ನೇ ಸಾಲಿನ ವಿವಿಧ ಸಂಘಗಳ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಡಿ.ಆರ್. ಕವಿತಾರವರು ವಿವಿಧ ಸಂಘಗಳಾದ ಭಾಷಾ ಸಂಘ, ಸ್ವಚ್ಛತಾ ಸಂಘ, ವಿಜ್ಞಾನ ಸಂಘ, ಗಣಿತ ಸಂಘ, ಸಮಾಜ ವಿಜ್ಞಾನ ಸಂಘ, ಸಾಂಸ್ಕೃತಿಕ ಸಂಘ, ಸ್ಕೌಟ್ ಮತ್ತು ಗೈಡ್ ಹಾಗೂ ಕ್ರೀಡಾ ಸಂಘಗಳಿಗೆ ಪ್ರತ್ಯೇಕವಾಗಿ ಧ್ವಜಾರೋಹಣವನ್ನು ನೆರವೇರಿಸಿಕೊಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿ ಸಂಘದ ಅಡಿಯಲ್ಲಿ ಅನೇಕ ಸಂಘಗಳನ್ನು ಸ್ಥಾಪನೆ ಮಾಡಿ, ನಾವೆಲ್ಲಾ ಒಂದೇ ಎಂಬುದನ್ನು ತೋರಿಸಿರುವುದು ಅತ್ಯಂತ ಹೆಮ್ಮೆಯ ವಿಷಯ. ಇಂತಹ ಸಂಘಗಳು ನಮ್ಮ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ. ವಿದ್ಯಾರ್ಥಿಗಳು ತಮ್ಮಲ್ಲಿರುವ ಸುಪ್ತ ಪ್ರತಿಭೆಯನ್ನು ಪ್ರದರ್ಶಿಸಲು ಇಂತಹ ಸಂಘಗಳು ಉತ್ತಮ ವೇದಿಕೆಯಾಗಿವೆ ಎಂದು ತಿಳಿಸಿದರು.

ಮುಖ್ಯೋಪಾಧ್ಯಾಯರಾದ ಶ್ರೀ ಎನ್.ಪಿ ಸತೀಶ್‌ರವರು ಶಾಲೆಯಲ್ಲಿ ಸ್ಥಾಪಿಸಲಾಗಿರುವ ಎಲ್ಲಾ ಸಂಘಗಳಿಂದ ಶಿಸ್ತನ್ನು ರೂಪಿಸಲು ಮತ್ತು ಮೂಡಿಸಲು ಸಾಧ್ಯವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಒಂದಲ್ಲಾ ಒಂದು ಸಂಘದಲ್ಲಿ ಭಾಗವಹಿಸಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲು ಇಂತಹ ಸಂಘಗಳು ಶಾಲಾ ಹಂತದಲ್ಲಿ ಅತಿ ಅವಶ್ಯಕವಾಗಿವೆ' ಎಂದು ತಿಳಿಸಿದರು.

ವಿವಿಧ ಸಂಘಗಳ ಸದಸ್ಯರಿಗೆ ಆಯಾ ಸಂಘಗಳ ಕಾರ್ಯದರ್ಶಿಗಳು ಹಾಗೂ ಜಂಟಿ ಕಾರ್ಯದರ್ಶಿಗಳ ಸಮ್ಮುಖದಲ್ಲಿ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. 8ನೇ ತರಗತಿಯ ವಿದ್ಯಾರ್ಥಿನಿಯರು ಪ್ರಾರ್ಥನೆ ಮಾಡಿದರು. 10ನೇ ತರಗತಿ ವಿದ್ಯಾರ್ಥಿ ಕು. ಎಸ್. ಸುಮಂತ್ ಸ್ವಾಗತಿಸಿದರು. ಕು. ಆರ್. ಹೇಮಲತಾ ಕಾರ್ಯಕ್ರಮ ನಿರೂಪಿಸಿದರು. ಕು. ಕೆ. ಭಾವನಾ ವಂದಿಸಿದರು. ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಬಾಳೆ ಬೆಳೆ ಕುರಿತು ತರಬೇತಿ

**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ದಿನಾಂಕ 17.7.2025ರಂದು ಬಾಳೆ ಬೆಳೆಯಲ್ಲಿ ಅನುಸರಿಸಬೇಕಾದ ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಎಸ್‌ಸಿಎಸ್‌ಪಿ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ಮಹದೇವಯ್ಯರವರು, ರೈತರು ವಿಜ್ಞಾನಿಗಳ ಸಲಹೆ ಮೇರೆಗೆ ಕೃಷಿ ಮಾಡಿ, ಉತ್ತಮ ಇಳುವರಿಯ ಬಾಳೆ ಬೆಳೆಯಿರಿ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ ಬಿ ಎನ್ ಜ್ಞಾನೇಶ್‌ರವರು ಮಾತನಾಡಿ, ಪ್ರಸ್ತುತ ಹವಾಮಾನದ ವೈಪರೀತ್ಯದಿಂದ ಬೆಳೆಗಳಲ್ಲಿ ಅನೇಕ ರೋಗಗಳು ಮತ್ತು ಕೀಟಗಳು ಬರುತ್ತಿವೆ. ಆದ್ದರಿಂದ ರೈತರು ವಿಜ್ಞಾನಿಗಳಿಂದ ವೈಜ್ಞಾನಿಕ ಸಲಹೆ ಪಡೆದು ಕೃಷಿ ಮಾಡಬೇಕು. ವಿವಿಧ ಬೆಳೆಗಳಿಗೆ ವೈಜ್ಞಾನಿಕ ಮಾಹಿತಿಯನ್ನು ಕೆವಿಕೆಗೆ ಬಂದು ಅಥವಾ ದೂರವಾಣಿ ಮುಖಾಂತರ ಸಲಹೆ ಸೂಚನೆ ಪಡೆದುಕೊಳ್ಳುವುದು ಸೂಕ್ತ. ಬಾಳೆ ಬೆಳೆಯು ನಮ್ಮ ಮೈಸೂರಿನ ಭೌಗೋಳಿಕ ಬೆಳೆ. ಆದುದರಿಂದ ಅದಕ್ಕೆ ಪ್ರಾಮುಖ್ಯತೆ ಕೊಟ್ಟು ಈ ತರಬೇತಿ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ರೈತರು ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕಾ ವಿಷಯ ತಜ್ಞರಾದ ಡಾ. ಜಿ.ಎಂ. ವಿನಯ್ ತಾಂತ್ರಿಕ ಅಧಿವೇಶನದಲ್ಲಿ ಮಾತನಾಡಿ, ಬಾಳೆ ಬೆಳೆಯಲ್ಲಿ ಭೂಮಿ ಸಿದ್ಧತೆ, ತಳಿಗಳ ಆಯ್ಕೆ, ನಂಜನಗೂಡು ರಸಬಾಳೆಯ ಪ್ರಾಮುಖ್ಯತೆ, ಕಂದುಗಳ ಆಯ್ಕೆ, ಜೈವಿಕ ಗೊಬ್ಬರಗಳ ಬಳಕೆ, ಟಿಶ್ಯೂ ಬಾಳೆಯು ಬಳಕೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ಸಮಗ್ರ ಕಳೆ ನಿರ್ವಹಣೆ, ಬಾಳೆ ಸಮೃದ್ಧಿ ಬಳಕೆ, ಸಸ್ಯ ಪ್ರಚೋದಕಗಳ ಬಳಕೆ ಹಾಗೂ ಬಾಳೆ ಬೆಳೆಯಲ್ಲಿ ಅಧಿಕ ಇಳುವರಿಯನ್ನು ಪಡೆಯುವ ಸುಲಭ ಮಾರ್ಗಗಳನ್ನು ರೈತರಿಗೆ ತಿಳಿಸಿದರು.

ಸಸ್ಯಸಂರಕ್ಷಣೆ ವಿಷಯ ತಜ್ಞರಾದ ಡಾ. ವೈ.ಪಿ. ಪ್ರಸಾದ್‌ರವರು ಬಾಳೆ ಬೆಳೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಸೊರಗು ರೋಗ, ಎಲೆ ಚುಕ್ಕೆ ರೋಗ, ಬಂಚಿ ಟಾಪ್ ರೋಗಗಳ ಲಕ್ಷಣಗಳು, ಅವುಗಳ ಗುರುತಿಸುವಿಕೆ ಹಾಗೂ ಸಮಗ್ರ ರೋಗ ನಿರ್ವಹಣೆ ಜೊತೆಗೆ ಬಾಳೆಯಲ್ಲಿ ಹೆಚ್ಚಾಗಿ ಕಾಣುವ ಕಾಂಡ ಹಾಗೂ ಗೆಡ್ಡೆ ಕೊರೆಯುವ ಹುಳು, ಜಂತು ಹುಳು, ಎಲೆ ತಿನ್ನುವ ರಸ ಹೀರುವ ಕೀಟಗಳ ಲಕ್ಷಣಗಳು, ಅವುಗಳ ಗುರುತಿಸುವಿಕೆ ಹಾಗೂ ಸಮಗ್ರ ನಿರ್ವಹಣೆ ಕುರಿತು ಹಾಗೂ ಜೈವಿಕ ಕೀಟನಾಶಕ ಬಳಕೆ ಬಗ್ಗೆ ಮಾಹಿತಿ ನೀಡಿದರು.

ಗೃಹವಿಜ್ಞಾನ ವಿಷಯ ತಜ್ಞರಾದ ಡಾ ದೀಪಕ್ ಬಾಳೆಯಲ್ಲಿ ಮೌಲ್ಯವರ್ಧನೆ ಕುರಿತು ಮಾತನಾಡಿ ಬಾಳೆ ಚಿಪ್ಸ್, ಬಾಳೆ ಜಾಮ್, ಬಾಳೆ ಹಣ್ಣಿನಿಂದ ತಯಾರು ಮಾಡಬಹುದಾದ ಉತ್ಪನ್ನಗಳು, ಬಾಳೆ ಹಣ್ಣನ್ನು ಉಪಯೋಗಿಸಿಕೊಂಡು ಬಾಳೆ ಹುಡಿ ಹಾಗೂ ಅದರ ಇತರ ಉತ್ಪನ್ನಗಳ ಕುರಿತು ಮಾಹಿತಿ ನೀಡಿದರು.

ರೈತ ಹಾಗೂ ವಿಜ್ಞಾನಿಗಳ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರಲ್ಲಿ ರೈತರು ಪ್ರಸ್ತುತ ಬಾಳೆಯಲ್ಲಿ ಬರುತ್ತಿರುವ ತೊಂದರೆಗಳ ಬಗ್ಗೆ ವಿವರಿಸಿ ವಿಜ್ಞಾನಿಗಳಿಂದ ಸಲಹೆ ಪಡೆದರು. ಪ್ರಗತಿಪರ ಬಾಳೆ ರೈತರು ತಮ್ಮ ಬಾಳೆ ಬೆಳೆಯ ಅನುಭವಗಳನ್ನು ಇತರೆ ರೈತರೊಂದಿಗೆ ಹಂಚಿಕೊಂಡರು. ನಂತರ ಕೃಷಿ ವಿಜ್ಞಾನ ಕೇಂದ್ರದ ಬಾಳೆಯ ನಿಖರ ಕೃಷಿ ತಾಕಿಗೆ ಭೇಟಿ ನೀಡಿ ಮಾಹಿತಿ ಪಡೆದರು. ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳಿಂದ ಸುಮಾರು 120ಕ್ಕೂ ಹೆಚ್ಚು ರೈತರು ಈ ಕಾರ್ಯಕ್ರಮಕ್ಕೆ ಆಗಮಿಸಿ ಸದುಪಯೋಗ ಪಡೆದುಕೊಂಡರು.

## ವಿಶ್ವ ಯುವ ಕೌಶಲ್ಯ ದಿನ




**ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ** ಹಾಗೂ ತಿಂಡ್ಲು ಬಾಯ್ಸ್ ಫೌಂಡೇಶನ್, ಅಧಿಷ್ಠಾನಂ ಟ್ರಸ್ಟ್, ವಿ ಕಮ್ಯುನಿಟಿ ಸಹಯೋಗದಲ್ಲಿ ದಿನಾಂಕ: 15.07.2025ರಂದು ಬೆಂಗಳೂರು ಉತ್ತರ ತಾಲ್ಲೂಕಿನ ತಿಂಡ್ಲುವಿನಲ್ಲಿ ವಿಶ್ವ ಯುವ ಕೌಶಲ್ಯ ದಿನ, ತರಬೇತಿ ಪ್ರಮಾಣ ಪತ್ರಗಳ ವಿತರಣೆ, ಬ್ಯೂಟಿಷಿಯನ್, ಟೈಲರಿಂಗ್, ಕಂಪ್ಯೂಟರ್ ತರಬೇತಿಗಳ ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಬೆಂಗಳೂರು ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಎಂ. ಮಹಾದೇವಯ್ಯನವರು ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ, ಇಂದು ಪ್ರಪಂಚದ ಯಾವುದೇ ದೇಶ ಪ್ರಗತಿ ಹೊಂದಿದೆ ಎಂದು ಭಾವಿಸಿದರೆ ಆ ದೇಶದಲ್ಲಿ ಯುವಕ–ಯುವತಿಯರಿಗೆ ಕೌಶಲ್ಯದಿಂದ ಕೂಡಿದ ಉನ್ನತ ಶಿಕ್ಷಣ ಲಭಿಸಿದೆ ಎಂದರ್ಥ. ಕೇವಲ ಮೂಲ ಶಿಕ್ಷಣ ಪಡೆದರೆ ಯಾವುದೇ ಉದ್ಯೋಗ ಲಭಿಸುವುದಿಲ್ಲ. ಯಾವುದಾದರೂ ಒಂದು ವೃತ್ತಿ ಕೌಶಲ್ಯ ಪಡೆದರೆ ಅನೇಕ ಕೆಲಸಗಳು ಸಿಗುತ್ತವೆ. ಆದ್ದರಿಂದ ಯುವ ಜನತೆ ಯಾವುದಾದರೂ ಒಂದು ಕೌಶಲ್ಯವನ್ನು ಕರಗತ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಬೆಂಗಳೂರು ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ನಿರ್ದೇಶಕರಾದ ಶ್ರೀಮತಿ ಡಿ.ಎಂ. ಶಶಿಕಲಾ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ತರಬೇತಿಗಳು ಅಗತ್ಯವಿರುವ ವ್ಯಕ್ತಿಗಳಿಗೆ ಕೌಶಲ್ಯ ಒದಗಿಸುವ ಉಪಕ್ರಮದಲ್ಲಿ ನಡೆಯುತ್ತಿದ್ದು, ತಮ್ಮ ಬಿಡುವಿನ ವೇಳೆಯಲ್ಲಿ ಹತ್ತಿರದ ಸ್ಥಳದಲ್ಲಿ ಕಲಿಯಬಹುದಾಗಿದೆ. ವಿಶ್ವ ಯುವ ಕೌಶಲ್ಯ ದಿನವನ್ನು ಜಗತ್ತಿನಾದ್ಯಂತ ಆಚರಿಸುತ್ತಿದ್ದು, ಯುವ ಪೀಳಿಗೆಯು ತಮ್ಮದೇ ಆದ ಉದ್ಯಮ ಸ್ಥಾಪಿಸಲು ಯಾವ ರೀತಿಯಲ್ಲಿ ಆರ್ಥಿಕ ಸಹಾಯ ಪಡೆಯಬಹುದೆಂದು ವಿವಿಧ ಇಲಾಖೆಗಳು ಮಾರ್ಗದರ್ಶನ ನೀಡಲಿವೆ, ಇದರ ಸದುಪಯೋಗ ಪಡೆಯಬೇಕು ಎಂದು ತಿಳಿಸಿದರು.

ತರಬೇತಿಯನ್ನು ಪಡೆದ 120 ಫಲಾನುಭವಿಗಳಿಗೆ ಪ್ರಮಾಣ ಪತ್ರಗಳನ್ನು ಹಾಗೂ ಅಗತ್ಯವಿರುವ ಅರ್ಹ 30 ಫಲಾನುಭವಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಸಹಾಯದಿಂದ ಟೈಲರಿಂಗ್ ಯಂತ್ರಗಳನ್ನು

ವಿತರಿಸಲಾಯಿತು. ಕಲಿಕಾರ್ಥಿಗಳು ಹಾಗೂ ಪಲಾನುಭವಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ತಿಂಡ್ಲು ಬಾಯ್ಸ್ ಫೌಂಡೇಷನ್ನಿನ ಶ್ರೀ ಆನಂದ್, ಅಧಿಷ್ಠಾನಂ ಟ್ರಸ್ಟ್‌ನ ಶ್ರೀ ಲೋಕನಾಥ್, ಶ್ರೀಮತಿ ಕಲ್ಯಾಣಿ, ವಿ ಕಮ್ಯುನಿಟಿ ಸಂಸ್ಥೆಯ ಶೈಲಜಾ, ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮಾಧಿಕಾರಿ ಶ್ರೀ ಎಲ್. ಅಶೋಕ, ಸಿಬ್ಬಂದಿ ವೃತ್ತಿ ಬೋಧಕರು, ಫಲಾನುಭವಿಗಳು, ಕಲಿಕಾರ್ಥಿಗಳು ಸೇರಿ 250 ಮಂದಿ ಪಾಲ್ಗೊಂಡಿದ್ದರು.

---

## ಸಾಧನೆಗೆ ಸ್ವಯಂಶಿಸ್ತು ಮತ್ತು ಸತತ ಅಭ್ಯಾಸ ಅಗತ್ಯ



ವಿದ್ಯಾರ್ಥಿಗಳಲ್ಲಿ ಕಲಿಯುವ ಹಂಬಲವಿದ್ದರೆ ಕಲ್ಲಿನ ಮೂರ್ತಿ ಕೂಡ ಕಲಿಸುತ್ತದೆ. ಕಲಿಕೆ ಎಂಬುದು ಜ್ಞಾನ ಸಂಪಾದನೆಯ ಮಾರ್ಗವಾಗಿದೆ. ವಿದ್ಯಾರ್ಥಿಗಳು ಕಲಿಕೆ ಮತ್ತು ಸಾಧನೆಯ ಗುರಿಯಲ್ಲಿ ಸ್ವಯಂಶಿಸ್ತು ಮತ್ತು ಸತತ ಅಭ್ಯಾಸ ಮಾಡುವ ಗುಣವನ್ನು ಕಾಪಾಡಿಕೊಳ್ಳಬೇಕು. ಶಿಸ್ತು ಮತ್ತು ಸತತ ಅಭ್ಯಾಸವಿಲ್ಲದೆ ಸಾಧನೆಯ ದಾರಿ ಅಪೂರ್ಣಗೊಂಡ ಉದಾಹರಣೆಗಳು ಇತಿಹಾಸದಲ್ಲಿ ಸಾಕಷ್ಟಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ. ಮಂಟೇಲಿಂಗು ಅವರು ಹೇಳಿದರು.

**ಮೈಸೂರು ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ** ಸ್ನಾತಕ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 'ದೀಕ್ಷಾರಂಭ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. "ವಿದ್ಯಾರ್ಥಿಗಳ ಭವಿಷ್ಯ ವಿದ್ಯಾರ್ಥಿಗಳ ಕೈಯಲ್ಲಿಯೇ ಇದೆ. ನಿಮ್ಮ ವ್ಯಕ್ತಿತ್ವವನ್ನು ಉದ್ಧಾರಗೊಳಿಸುವ ಶಕ್ತಿಗಳ ಕಡೆ ನಿಮ್ಮ ಆಲೋಚನೆ ಇರಬೇಕು. ದುರ್ಬಲಗೊಳಿಸುವುದರ ಬಗ್ಗೆ ಸದಾ ಎಚ್ಚರವಿರಬೇಕು. ಮಾನವನಿಗೆ ಹಲವು ಬಗೆಯ ಸಾಮರ್ಥ್ಯಗಳಿವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಆದರ್ಶವಿರುವ ವ್ಯಕ್ತಿ ನೂರು ತಪ್ಪುಗಳನ್ನು ಮಾಡಿದರೆ,

ಆದರ್ಶವಿಲ್ಲದವ ಸಾವಿರ ತಪ್ಪುಗಳನ್ನು ಮಾಡುತ್ತಾನೆ. ಆದರ್ಶ ಬದುಕಿಗೆ ಭೂಷಣವಾಗಿರಬೇಕು. ನಮ್ಮ ವ್ಯಕ್ತಿತ್ವವನ್ನು ದುರ್ಬಲಗೊಳಿಸುವ ವಿಷಯಗಳನ್ನು ವಿಷದಂತೆ ತ್ಯಜಿಸಿ, ಸಬಲಗೊಳಿಸುವುದನ್ನು ಅಮೃತದಂತೆ ಬಲಗೊಳಿಸಿ" ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು 'ದೀಕ್ಷಾರಂಭ' ಕಾರ್ಯಕ್ರಮದ ಪರಿಕಲ್ಪನೆ ಮತ್ತು ಮಹತ್ವವನ್ನು ವಿವರಿಸುತ್ತಾ ಭಾರತೀಯ ಉನ್ನತ ಶಿಕ್ಷಣ ವ್ಯವಸ್ಥೆಯು ಪ್ರತಿಯೊಬ್ಬ ವಿದ್ಯಾರ್ಥಿಗೂ ಗುಣಮಟ್ಟದ ಶಿಕ್ಷಣ ನೀಡುವ ಜವಾಬ್ದಾರಿಯನ್ನು ವಿಶ್ವವಿದ್ಯಾನಿಲಯಗಳಿಗೆ ನೀಡಿದೆ. ಇದಕ್ಕೆ ಪೂರಕವಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮಾರ್ಗದರ್ಶನದಂತೆ ಪ್ರಥಮ ವರ್ಷದ ಪದವಿ ಅಥವಾ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಪ್ರವೇಶ ಪಡೆದಿರುವ ಹೊಸ ವಿದ್ಯಾರ್ಥಿಗಳಿಗೆ 'ದೀಕ್ಷಾರಂಭ' ಕಾರ್ಯಕ್ರಮವನ್ನು ಆಯೋಜಿಸಿ ಕಾರ್ಯಕ್ರಮದ ಶೈಕ್ಷಣಿಕ, ಪಠ್ಯೇತರ ಹಾಗೂ ವಿದ್ಯಾಸಂಸ್ಥೆಯ ಎಲ್ಲಾ ವ್ಯವಸ್ಥೆಗಳನ್ನು ಪರಿಚಯಿಸಿ, ಉತ್ತಮ ಕಲಿಕೆಗೆ ಅಡಿಪಾಯ ಹಾಕಿಕೊಡಬೇಕಾಗಿದೆ. ವಿದ್ಯಾರ್ಥಿಗಳು ಹೊಸ ಪರಿಸರದೊಂದಿಗೆ ಒಗ್ಗಿಕೊಳ್ಳಲು ಸಹಾಯವಾಗುವಂತೆ, ಅವರ ಮತ್ತು ಶಿಕ್ಷಕರ ನಡುವಿನ ಬಾಂಧವ್ಯವನ್ನು ಬೆಳೆಸಲು, ಸೂಕ್ಷ್ಮತೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುವುದಕ್ಕಾಗಿ, ಸಾಮಾಜಿಕ ಪ್ರಸ್ತುತತೆಯ ವಿವಿಧ ಸಮಸ್ಯೆಗಳು ಮತ್ತು ಜವಾಬ್ದಾರಿಯುತ ನಾಗರಿಕರಾಗಲು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ ನೀಡುವುದೂ ಸಹ ಈ 'ದೀಕ್ಷಾರಂಭ' ಕಾರ್ಯಕ್ರಮದ ಉದ್ದೇಶ. ವಿದ್ಯಾರ್ಥಿಗಳ 'ದೀಕ್ಷಾರಂಭ' ಹಲವಾರು ವಿಭಿನ್ನ ಅಂಶಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳು ಸಾಮಾಜೀಕರಣ, ಸಹವರ್ತಿಸುವುದು, ಆಡಳಿತ, ಅನುಭವ ಇವುಗಳನ್ನು ಪಡೆಯುವಲ್ಲಿ ಈ ಕಾರ್ಯಕ್ರಮ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದನ್ನು ಸದುಪಯೋಗಪಡಿಸಿಕೊಂಡು ವಿದ್ಯಾರ್ಥಿಗಳು ಉತ್ತಮ ನಡೆಯೊಂದಿಗೆ ಅಧ್ಯಯನದಲ್ಲಿ ಸದಾ ನಿರತರಾಗಬೇಕು. ಶಿಸ್ತು ಮತ್ತು ಬದ್ಧತೆಯನ್ನು ಅಳವಡಿಸಿಕೊಳ್ಳಬೇಕು. ಈ ದೇಶದ, ಸಮಾಜದ ನಿಷ್ಠಾವಂತ ನಾಗರಿಕರಾಗಿ ವಿದ್ಯಾರ್ಥಿಗಳು ರೂಪುಗೊಳ್ಳಬೇಕು ಎಂದರು.

ವಿದ್ಯಾರ್ಥಿನಿ ಕು. ಅದಿತಿ ಹೆಗ್ಡೆ ಮತ್ತು ಕು. ಕ್ಷೀರಾ ಶಾನ್‌ಭೋಗ್ ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭು ಸ್ವಾಗತಿಸಿದರು. ಶ್ರೀಮತಿ ಪೂಜಾ ಕಾರ್ಯಕ್ರಮ ನಿರೂಪಿಸಿದರು. ಡಾ. ಎಲ್. ವಿನಯ್‌ಕುಮಾರ್ ವಂದಿಸಿದರು.

## ಮೌಖಿಕ ಮಹಾಕಾವ್ಯ ಪರಂಪರೆ ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆಯ ಪ್ರತೀಕ

ಜಾನಪದ ಮೌಖಿಕ ಮಹಾಕಾವ್ಯ ಪರಂಪರೆ ಭಾರತೀಯ ಸಂಸ್ಕೃತಿಗೆ ಅತ್ಯಂತ ಶ್ರೀಮಂತಿಕೆಯನ್ನು ತಂದುಕೊಟ್ಟಿದೆ. ಮಲೆ ಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪನಕಾವ್ಯ ಮೈಲಾರಲಿಂಗನ ಕಾವ್ಯಗಳು ಭಾರತೀಯ ಸಂಸ್ಕೃತಿಯ ಸಂಪದ್ಭರಿತ ಕಾವ್ಯಗಳಾಗಿವೆ ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಡಾ. ಕೆ.ವಿ. ನಾಗರಾಜಮೂರ್ತಿ ತಿಳಿಸಿದರು.

**ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಕರ್ನಾಟಕ ನಾಟಕ ಅಕಾಡೆಮಿ ಜೆಎಸ್‌ಎಸ್ ಮಹಿಳಾ ಕಾಲೇಜು ಹಾಗೂ ರಂಗವಾಹಿನಿ ಸಂಯುಕ್ತವಾಗಿ ದಿನಾಂಕ 16.7.2025 ರಂದು ಆಯೋಜಿಸಿದ್ದ 'ಜಾನಪದ ಮೌಖಿಕ ಮಹಾಕಾವ್ಯಗಳು ಮತ್ತು ಕನ್ನಡ ರಂಗಭೂಮಿ' ಎಂಬ ವಿಷಯವನ್ನು ಕುರಿತ ವಿಚಾರ ಸಂಕಿರಣದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು. ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷದಲ್ಲಿ ಶೋಷಿತ ಜನಾಂಗವನ್ನು ಪ್ರತಿನಿಧಿಸಿದವರು ಮಲೆಮಹದೇಶ್ವರ, ಮಂಟೇಸ್ವಾಮಿ, ಬಸವಣ್ಣ. ಮಂಟೇಸ್ವಾಮಿ ಕಾವ್ಯ ಪ್ರಸಂಗವನ್ನು



ನೀಲಗಾರರು, ಮಲೆಮಹದೇಶ್ವರ ಕಾವ್ಯ ಪ್ರಸಂಗವನ್ನು ಗುಡ್ಡರು ನಾಡಿನಾದ್ಯಂತ ಪ್ರಸ್ತುತಪಡಿಸಿ ಜಾನಪದ ಕಲೆಯನ್ನು ಜೀವಂತವಾಗಿರಿಸಿದ್ದಾರೆ. ಮೌಖಿಕ ಕಾವ್ಯಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಈ ಕಾವ್ಯಗಳು ಜನರ ಜೀವನಾನುಭವದ ಮೂಸೆಯಲ್ಲಿ ಮೂಡಿ ಬಂದಂತಹ ಕಥಾನಕಗಳು. ಈ ಕಾವ್ಯಗಳು ಮುಂದಿನ ಭವಿಷ್ಯದ ಘಟನಾವಳಿಗಳಿಗೆ ದರ್ಶನವನ್ನು ನೀಡುತ್ತವೆ. ಇದು ಕೇವಲ ಒಂದು ಜನಾಂಗ ಅಥವಾ ಜಾತಿಗೆ ಸೀಮಿತವಲ್ಲ. ಎಲ್ಲಾ ಜಾತಿ ಮತ್ತು ಜನಾಂಗಗಳಿಗೂ ಸೇರಿದವುಗಳಾಗಿವೆ ಎಂದರು.

ಮಲೆ ಮಹದೇಶ್ವರ ಮತ್ತು ಮಂಟೇಸ್ವಾಮಿಯನ್ನು ಆರಾಧಿಸುವ ಜನರು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ಕಥಾನಾಯಕರ ಬಗ್ಗೆ ಒಂದು ಧಾರ್ಮಿಕ ನಂಬಿಕೆ ದೈವತ್ವದ ಕಲ್ಪನೆ ಇದೆ. ಆದರೆ ಅವರಾರೂ ದೇವರಲ್ಲ ಎಂಬುದು ಅಷ್ಟೇ ಸತ್ಯ. ಅವರು ಅನುಭಾವಿಗಳು. ಅವರು ಜನರನ್ನು ಕಷ್ಟಕಾಲದಲ್ಲಿ ಕಾಪಾಡಿದ ಮಹಾಚೇತನಗಳು. ಬಸವಣ್ಣನವರಂತೆ ಮಲೆ ಮಹದೇಶ್ವರ, ಮಂಟೇಸ್ವಾಮಿ ಅವರುಗಳು ಇತಿಹಾಸ ಪುರುಷರು ಮತ್ತು ಸಮಾಜ ಸುಧಾರಕರು. ಧಾರ್ಮಿಕ ನೆಲೆಯಲ್ಲಿ ಶೋಷಿತ ಜನಾಂಗಕ್ಕೆ ಸ್ವಾತಂತ್ರ್ಯ ಮತ್ತು ಸಮಾನತೆ ದೊರಕಬೇಕೆಂದು ಪ್ರತಿಪಾದಿಸಿದವರು. ಮಂಟೇಸ್ವಾಮಿ ಮತ್ತು ಮಲೆ ಮಹದೇಶ್ವರ ಕಾವ್ಯಗಳು ನವಿರಾದ ಹಾಸ್ಯದಿಂದ ಕೂಡಿದ್ದು, ಸಾಮರಸ್ಯದ ಬದುಕಿನ ಜೊತೆಗೆ ವೈಚಾರಿಕ ಚಿಂತನೆಗಳನ್ನು ಒಳಗೊಂಡಿದೆ. ಪ್ರಸ್ತುತ ದೇಶದ ಸಾಮಾಜಿಕ ಸ್ಥಿತಿಗತಿಯಲ್ಲಿ ಹಾದಿ ತಪ್ಪುತ್ತಿರುವ ಯುವಜನಾಂಗಕ್ಕೆ ಮಾನಸಿಕ ಧೈರ್ಯವನ್ನು ತುಂಬಿ ಆತ್ಮಪ್ರಜ್ಞೆಯನ್ನು ಎಚ್ಚರಿಸುವಂತಹ ಕಾರ್ಯವನ್ನು ಈ ಮೌಖಿಕ ಮಹಾಕಾವ್ಯಗಳು ಮಾಡುತ್ತಿವೆ. ಜೊತೆಗೆ ಮನುಷ್ಯನ ಆತ್ಮಶಕ್ತಿಯನ್ನು ಹೆಚ್ಚಿಸುವ ಮತ್ತು ಅರಿವನ್ನುಂಟುಮಾಡುವ ಪ್ರೇರಕಗಳಾಗಿವೆ ಎಂದು ಹೇಳಿದರು.

ಜಾನಪದ ಮಹಾಕಾವ್ಯಗಳು ವೈದಿಕ ಸಂಸ್ಕೃತಿಗೆ ವಿರುದ್ಧವಾಗಿ ಜನ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿದ ಮೌಖಿಕ ಮಹಾಕಾವ್ಯಗಳಾಗಿವೆ. ನಮ್ಮ ಭಾರತೀಯ ಸಂಸ್ಕೃತಿ ಬಹುಮುಖಿ ಸಂಸ್ಕೃತಿ. ಆದರೆ ಇಂದು ಏಕಮುಖಿ ಸಂಸ್ಕೃತಿಯಾಗುತ್ತಿದೆ. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಸಾಂಸ್ಕೃತಿಕ ಬದಲಾವಣೆ ಜೊತೆಗೆ ಸಮುದಾಯದ ಬದಲಾವಣೆಯ ಅಗತ್ಯವಿದೆ. ಈ ಮಹಾಕಾವ್ಯಗಳ

ಸತ್ವವನ್ನು ಎಲ್ಲಾ ಜನರಿಗೂ ತಲುಪಿಸುವ ಅಗತ್ಯವಿದೆ. ಮೌಖಿಕ ಕಾವ್ಯಗಳ ಮೂಲಕ ಜನರಲ್ಲಿ ಸಾಮಾಜಿಕ ಪ್ರಜ್ಞೆ, ಆತ್ಮಪ್ರಜ್ಞೆಯು ಅರಿವನ್ನುಂಟುಮಾಡುವ ಅವಶ್ಯಕತೆಯಿದೆ. ಏಕ ಸಂಸ್ಕೃತಿಯನ್ನು ಬಿಟ್ಟು, ಮನುಜಮತ– ವಿಶ್ವಪಥದೆಡೆಗೆ ಸಾಗಬೇಕಾದರೆ ಬಹು ಸಂಸ್ಕೃತಿಯ ಗುಣಗಳನ್ನು ಬೆಳೆಸುವ ಮೌಖಿಕ ಮಹಾಕಾವ್ಯ ಪರಂಪರೆ ಇಂದು ನಮಗೆ ಬೇಕಾಗಿದೆ ಎಂದು ಹೇಳಿದರು.

ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದ ಬೆಂಗಳೂರಿನ ರಂಗತಜ್ಞರಾದ ಶ್ರೀ ಶಶಿಧರ್ ಭಾರಿಘಾಟ್ ಅವರು 'ಜಾನಪದ ಮೌಖಿಕ ಮಹಾಕಾವ್ಯ–ರಂಗ ಪ್ರಯೋಗದಲ್ಲಿನ ಹೊಸ ಸಾಧ್ಯತೆಗಳು' ಎಂಬ ವಿಷಯವನ್ನು ಕುರಿತು ಮಾತನಾಡಿದರು. ಜಾನಪದ ಮಹಾಕಾವ್ಯಗಳಂತೆ ರಂಗಭೂಮಿಯೂ ಪ್ರಾಚೀನವಾದುದು. ಜನಪದರು ತಮ್ಮ ಬದುಕಿನ ಅನುಭವವನ್ನು ರಂಗ ಮಾಧ್ಯಮದಲ್ಲಿ ಬಳಸಿದ್ದಾರೆ. ಎಲ್ಲಾ ಕಲೆಗಳಿಗೂ ಜನಪದವೇ ಆಕರ ಮತ್ತು ಪ್ರೇರಣೆ. ಆಧುನಿಕ ರಂಗಭೂಮಿ ತನ್ನ ಮಾಧ್ಯಮ, ರೂಪ, ಅಭಿವ್ಯಕ್ತಿ ಎಲ್ಲದಕ್ಕೂ ಜನಪದ ಮಹಾಕಾವ್ಯಗಳ ಮೂಲಕವೇ ವಸ್ತು ಪಡೆದುಕೊಳ್ಳುತ್ತಿದೆ. ಮಲೆ ಮಹದೇಶ್ವರ, ಜುಂಜಪ್ಪನ ಪ್ರಸಂಗ, ಮೈಲಾರಲಿಂಗನ ಪ್ರಸಂಗ ಎಲ್ಲವೂ ಮೌಖಿಕ ಪರಂಪರೆಯಿಂದ ಬಂದಂತವುಗಳೇ ಆಗಿವೆ. ಆಧುನಿಕ ರಂಗಭೂಮಿ ವಿಕಾಸವಾಗಿರುವುದು 150 ವರ್ಷಗಳಿಂದೀಚೆಗೆ, ಹೊಸ ನಿಟ್ಟಿನ ಆಲೋಚನೆಗಳು ರಂಗಭೂಮಿಗೆ ಬಂದಿದ್ದು ಬ್ರಿಟಿಷರ ಪ್ರಭಾವದಿಂದಲೇ ಆದರೂ ನಮ್ಮಲ್ಲಿ ಹಿಂದಿನಿಂದಲೂ ನಾಟಕ ಪ್ರಕಾರ ಇತ್ತು ಎಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಪಾರಸಿ ರಂಗಭೂಮಿಯು ವೃತ್ತಿರಂಗಭೂಮಿಗೆ ಪ್ರೇರಣೆಯನ್ನು ನೀಡಿತು. ಜಾನಪದ ಕಥಾನಕಗಳನ್ನು ವೃತ್ತಿರಂಗಭೂಮಿ ಅಭಿನಯಿಸುತ್ತಾ ಬಂದಿದೆ. ವೃತ್ತಿರಂಗಭೂಮಿಯ ಜೊತೆ ಜೊತೆಗೆ ಆಧುನಿಕ ರಂಗಭೂಮಿಯೂ ಬೆಳೆಯುತ್ತಾ ಬಂದಿದೆ ಎಂಬುದು ವಾಸ್ತವಿಕ. ಆಧುನಿಕ ರಂಗಭೂಮಿ ಎಷ್ಟೇ ಹೊಸ ಆಲೋಚನೆ ವಿಚಾರ ಚಿಂತನೆ ಮಾಡುತ್ತಿದೆ ಎಂದು ಹೇಳಿಕೊಂಡರೂ, ಜಾನಪದ ಮೌಖಿಕ ಸಾಹಿತ್ಯದ ವೈಚಾರಿಕತೆಯನ್ನು ಇವತ್ತಿಗೂ ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲೇ ಇದ್ದೇವೆ. ಮೌಖಿಕ ಕಾವ್ಯಗಳಲ್ಲಿ ಬರುವ ಸ್ತ್ರೀ ಶೋಷಣೆ, ಬಡತನ, ಬಡವ ಶ್ರೀಮಂತರ ನಡುವಿನ ಅಂತರ ಆ ಕಾಲದಿಂದಲೂ ಬಂದಿರುವಂತಹ ಸಂಗತಿಗಳೇ ಆಗಿವೆ. ಆದರೂ ಜಾನಪದ ರಂಗಭೂಮಿ ಬಹಳ ಕಾಲದಿಂದಲೇ ಸಮಾಜ ಸುಧಾರಣೆಯ ಹೋರಾಟದಲ್ಲಿ ತೊಡಗಿಕೊಂಡಿದೆ ಎಂದರು.

ಮೌಖಿಕ ಮಹಾಕಾವ್ಯದ ಕಥಾನಾಯಕರು ದೇವರಲ್ಲ ಸಮಾಜ ಸುಧಾರಕರಷ್ಟೇ. ಜನಮಾನಸದಲ್ಲಿ ಗಟ್ಟಿ ನಾಯಕರಾಗಿ ಉಳಿದುಕೊಂಡಿದ್ದಾರೆ. ಆಧುನಿಕ ರಂಗಭೂಮಿ ವರ್ತಮಾನದಲ್ಲಿ ನಿಂತು ಜಾನಪದ ಕಾವ್ಯಗಳನ್ನು ಹೇಗೆ ನೋಡಬಹುದು ಮತ್ತು ವರ್ತಮಾನದ ಸಮಸ್ಯೆಗಳಿಗೆ ಜಾನಪದ ಮಹಾಕಾವ್ಯಗಳಲ್ಲಿ ಪರಿಹಾರ ಸಿಗಬಹುದೇನೋ ಎಂಬ ಹುಡುಕಾಟದಲ್ಲಿ ತೊಡಗಿದೆ. ಆಧುನಿಕ ರಂಗಭೂಮಿ 70ರ ದಶಕದಲ್ಲಿ ಹೊಸ ತಿರುವನ್ನು ಪಡೆದುಕೊಂಡು ಮೌಖಿಕ ಕಾವ್ಯಗಳ ಮೌಲ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕೆಲಸವನ್ನು ಮಾಡುತ್ತಿದೆ. ಸಾಂಸ್ಕೃತಿಕ ನೆಲೆಗಟ್ಟು ಇತಿಹಾಸದ ಚೌಕಟ್ಟಿನಲ್ಲಿ ಎಲ್ಲಾ ಜನಪದ ಕಾವ್ಯಗಳನ್ನು ನೋಡಲಾಗುತ್ತಿದೆ. ಮಹಾಚೈತ್ರ, ಮಂಟೇಸ್ವಾಮಿ ಕಥಾ ಪ್ರಸಂಗ, ಮಾದಾರಿ ಮಾದಯ್ಯ, ಸತಿ ಮೊದಲಾದ ನಾಟಕಗಳು ಜಾನಪದ ಮೌಖಿಕ ಆಕರಗಳನ್ನಿಟ್ಟುಕೊಂಡು ಆಧುನಿಕ ರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುತ್ತಿದೆ. ಶ್ರಮಿಕರ ಕಲೆಯಾಗಿದ್ದ ಜಾನಪದ ಮೌಖಿಕ ಕಾವ್ಯಗಳನ್ನು ನಗರೀಕರಣಗೊಳಿಸುತ್ತಿದ್ದೇವೆ ಎಂದು ಅಭಿಪ್ರಾಯಪಟ್ಟರು.

ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದ ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರಿನ ಶೇಷಾದ್ರಿಪುರಂ ಸಂಜೆ ಕಾಲೇಜಿನ ನಾಟಕ ವಿಭಾಗದ ಮುಖ್ಯಸ್ಥರಾದ ಶ್ರೀ ಜಗದೀಶ್ ಸಿ ಜಾಲ ಅವರು 'ಡಾ. ಎಚ್.ಎಸ್. ಶಿವಪ್ರಕಾಶರ ನಾಟಕಗಳಲ್ಲಿ ಜಾನಪದ ಮೌಖಿಕ ಪರಂಪರೆಯ ಅನಾವರಣ' ಎಂಬ ವಿಷಯವನ್ನು ಕುರಿತು ಮಾತನಾಡಿದರು. ಜಾನಪದ ಕಲೆ ಎಲ್ಲಾ ಕಲೆಗಳ ತಾಯಿ ಬೇರು, ಎಲ್ಲಿ ಜನಪದ ಬೇರುಗಳು ಗಟ್ಟಿಯಾಗಿರುತ್ತವೋ ಅಲ್ಲಿ ಸಂಸ್ಕೃತಿ ಸಮೃದ್ಧವಾಗಿ ಬೆಳೆಯುತ್ತದೆ. ಡಾ. ಎಚ್.ಎಸ್. ಶಿವಪ್ರಕಾಶರು ಭಾವನಾತ್ಮಕವಾಗಿ ನಾಟಕಗಳನ್ನು ಬರೆದಿದ್ದಾರೆ. ಇವರ ನಾಟಕಗಳ ಮೇಲೆ

ಶರಣ ಚಳುವಳಿಯ ಪ್ರಭಾವವಿದೆ. ಸಮ ಸಮಾಜದ ಕಲ್ಪನೆ ಇವರ ನಾಟಕಗಳಲ್ಲಿ ಇದೆ. ಇವರ ಪ್ರಥಮ ನಾಟಕ ಮಹಾಚೈತ್ರ ಇದು ಮಾರ್ಕ್ಸ್‌ವಾದಿ ವಿಶ್ಲೇಷಣೆಯ ಮೂಲಕ ಕಲ್ಯಾಣ ನಗರದ ಶರಣರ ಹೋರಾಟಗಳನ್ನು ಚಿತ್ತರಿಸಿತು. ನಾಟಕ ಸಾಹಿತ್ಯ ಇತಿಹಾಸದಲ್ಲಿ ಒಂದು ಹೆಗ್ಗುರುತಾಯಿತು. ಮಂಟೇಸ್ವಾಮಿ ಕಥಾಪ್ರಸಂಗ, ಮಾದರಿ ಮಾದಯ್ಯ, ಮದುವೆ ಹೆಣ್ಣು, ಮಾಧವಿ, ಸತಿ ಮುಂತಾದ ನಾಟಕಗಳು ಮೌಖಿಕ ಪರಂಪರೆಯ ಸತ್ವವನ್ನು ಒಳಗೊಂಡಿವೆ. 16ನೇ ಶತಮಾನದ ದಲಿತ ಸಂತನನ್ನು ಕುರಿತ ಮಂಟೇಸ್ವಾಮಿ ಕಥಾಪ್ರಸಂಗವು 300ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡು, ಅಸ್ಪೃಶ್ಯ ಸಂತನ ಮೇಲೆ ಜನರ ಆಸಕ್ತಿಯನ್ನು ಹೆಚ್ಚಿಸಿತು. ಮಂಟೇಸ್ವಾಮಿಯ ಜೀವನವು ಕನ್ನಡ ಸಾಹಿತ್ಯದಲ್ಲಿ ಸಂಶೋಧನೆಯ ಒಂದು ಪ್ರಮುಖ ಕ್ಷೇತ್ರವಾಯಿತು. ಹೀಗೆ ಡಾ. ಎಚ್.ಎಸ್. ಶಿವಪ್ರಕಾಶರ ನಾಟಕಗಳು ಬಹುಪಾಲು ಮಾರ್ಕ್ಸ್‌ವಾದ, ಶೈವತತ್ವ ವಿಶೇಷವಾಗಿ ಲಿಂಗಾಯಿತ ಮತ್ತು ಕಾಶ್ಮೀರದ ಶೈವತತ್ವದಿಂದ ಪ್ರಭಾವಿತವಾಗಿದೆ. ಇದರ ಜೊತೆಗೆ ಇವರ ನಾಟಕಗಳು ಮೌಖಿಕ ಮಹಾ ಕಾವ್ಯಗಳ ಸತ್ವವನ್ನು ಹೀರಿ ಪ್ರಸ್ತುತ ಸಮಾಜಕ್ಕೆ ನೈಜ ಮೌಲ್ಯಗಳನ್ನು ಒದಗಿಸುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಚಾಮರಾಜನಗರ ಜಿಲ್ಲೆಯ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಆರ್.ಎಂ. ಸ್ವಾಮಿ ಅವರು ಮಾತನಾಡುತ್ತಾ ಚಾಮರಾಜನಗರ ಜಿಲ್ಲೆ ಜನಪದ ಸಾಹಿತ್ಯದಲ್ಲಿ ಅತ್ಯಂತ ಶ್ರೀಮಂತವಾಗಿದೆ. ಜಾನಪದ ಸಾಹಿತ್ಯದ ಮೂಲ ನೆಲೆ ನಮ್ಮ ಜಿಲ್ಲೆ ಎಂಬುದು ಹೆಮ್ಮೆಯ ಸಂಗತಿ. ಮಂಟೇಸ್ವಾಮಿ, ಮಲೆಮಹದೇಶ್ವರರಂತಹ ಮಹಾಪುರುಷರು ಅವತರಿಸಿರುವುದು ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ, ಈ ಕಾರಣದಿಂದ ನಮ್ಮ ಮೌಖಿಕ ಸಾಹಿತ್ಯ ಪರಂಪರೆಯನ್ನು ಪೋಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಜೆಎಸ್‌ಎಸ್ ಸಂಸ್ಥೆ ಪ್ರತಿ ವರ್ಷ ರಂಗೋತ್ಸವ ಎಂಬ ಕಾರ್ಯಕ್ರಮದ ಅಡಿಯಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ ರಂಗತರಬೇತಿಯನ್ನು ನೀಡಿ, ಮೌಖಿಕ ಮಹಾಕಾವ್ಯಗಳನ್ನು ನಾಟಕ ರೂಪದಲ್ಲಿ ಅಭಿನಯಿಸಲು ಅವಕಾಶ ಮಾಡಿಕೊಟ್ಟು, ಜಾನಪದ ಪರಂಪರೆಯನ್ನು ಉಳಿಸಿಕೊಂಡು ಬರುವಲ್ಲಿ ಸಕ್ರಿಯವಾಗಿದೆ ಎಂದು ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್ ಮಹದೇವಸ್ವಾಮಿ ಅವರು ಮಾತನಾಡುತ್ತಾ, ಇದೊಂದು ಮೌಲ್ಯಯುತವಾದ ವಿಚಾರ ಸಂಕಿರಣ. ನಮ್ಮ ಪರಂಪರೆ ಜನಪದ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಜನಪದ ಸಂಸ್ಕೃತಿ ನಮ್ಮ ಬದುಕಿಗೆ ಸ್ಫೂರ್ತಿಯಾಗಿ ಬದುಕನ್ನು ಸಮರ್ಥ ರೀತಿಯಲ್ಲಿ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಭಾರತೀಯ ಸಂಸ್ಕೃತಿಯ ಜನಪದ ಬೇರುಗಳಿರುವುದು ಕರ್ನಾಟಕದಲ್ಲಿ ಎಂಬುದು ಹೆಮ್ಮೆಯ ಸಂಗತಿ. ರಾಚಪ್ಪಾಜಿ, ಸಿದ್ದಪ್ಪಾಜಿ, ಮಲೆಮಹದೇಶ್ವರ, ಮಂಟೇಸ್ವಾಮಿ ಮೊದಲಾದ ಜಾನಪದ ಮೌಖಿಕ ಮಹಾಕಾವ್ಯಗಳು ಈ ಭಾಗದ ಜನಮಾನಸದಲ್ಲಿ ಬೇರೂರಿವೆ. ರಾಜ್ಯಗಳನ್ನು ಆಳಿದ ಮಹಾರಾಜರುಗಳು ಸ್ಥಳೀಯ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದ್ದಾರೆ. ಭಾರತೀಯ ಸಂಸ್ಕೃತಿ ನೆಲೆಗೊಂಡಿರುವುದೇ ಬಹುತ್ವದ ನೆಲೆಯಲ್ಲಿ. ಬಹು ಜನರ ಹಿತಾಸಕ್ತಿ ಮೌಖಿಕ ಸಾಹಿತ್ಯದಲ್ಲಿ ಉಳಿದುಕೊಂಡಿದೆ. ಶಿಷ್ಟ ಸಂಸ್ಕೃತಿ ಮತ್ತು ಜಾನಪದ ಸಂಸ್ಕೃತಿಗಳ ಸಂಘರ್ಷದಲ್ಲಿ ಮೌಖಿಕ ಪರಂಪರೆ ತಳ ಸಮುದಾಯದವರ ದನಿಯಾಗಿ ಕೆಲಸ ಮಾಡಿದೆ. ರಾಜ ಮಹಾರಾಜರುಗಳ ಆಸ್ಥಾನಗಳಲ್ಲೂ ಕೂಡ ಜಾನಪದ ಸಂಸ್ಕೃತಿಯನ್ನು ಕೀಳಾಗಿ ನೋಡುವ ಪರಂಪರೆಯಿತ್ತು ಎಂಬುದಕ್ಕೆ ನಿದರ್ಶನಗಳಿವೆ. ಆದರೆ ಇತಿಹಾಸದ ನೈಜ ವಿಚಾರಗಳು ದೊರಕುವಂಥದ್ದು ಜಾನಪದ ಕಾವ್ಯಗಳಲ್ಲಿ ಎಂಬುದು ಮುಖ್ಯ ಸಂಗತಿ. ಉದಾಹರಣೆಗೆ ಫ್ಲೀಟ್ ಸಂಗ್ರಹಿಸಿರುವ ಲಾವಣಿಗಳಲ್ಲಿ ನೈಜ ವಿಚಾರಧಾರೆಗಳು ದೊರಕುತ್ತವೆ. ಹಾಗಾಗಿ ಈ ನಿಟ್ಟಿನಲ್ಲಿ ಜಾನಪದ ಮೌಖಿಕ ಕಾವ್ಯಗಳ ಬಗ್ಗೆ ಹೆಚ್ಚಿನ ಸಂಶೋಧನೆಗಳು ಆಗಬೇಕಾಗಿದೆ. ಜಾನಪದ ಸಂಸ್ಕೃತಿ ಬಾಯ್ದೆರೆಯಿಂದ ಬಂದಿರುವುದು. ಬಾಯ್ದೆರೆಯಲ್ಲಿ ಅವರು ಸೃಷ್ಟಿ ಮಾಡುವ ಕಥೆ, ಆಲೋಚನೆಗಳು ಅವರ ಜೀವನಾನುಭವಗಳೇ ಆಗಿರುವುದರಿಂದ ಜಾನಪದ ಸಾಹಿತ್ಯ ಅನುಭವಿಗಳ

ಸಾಹಿತ್ಯ. ಜೀವನ ಮೌಲ್ಯಗಳನ್ನು ದೃಷ್ಟಾಂತಗಳ ಮೂಲಕ ವೈಚಾರಿಕ ನೆಲೆಯಲ್ಲಿ ಕೊಡುವ ಕೆಲಸವನ್ನು ಜಾನಪದ ಮಹಾಕಾವ್ಯಗಳು ಮಾಡಿವೆ. ಮೌಖಿಕ ಮಹಾಕಾವ್ಯಗಳ ನಾಯಕರು ಸಮಾಜ ಸುಧಾರಕರಾಗಿ ಸಮ ಸಮಾಜದ ನಿರ್ಮಾಪಕರಾಗಿ ಕೆಲಸ ಮಾಡಿದ್ದಾರೆ. ಜಾನಪದ ಸಂಸ್ಕೃತಿ ಶಿಷ್ಟ ಸಂಸ್ಕೃತಿಗಿಂತ ಪ್ರಗತಿಪರ ಧೋರಣೆಯನ್ನು ಹೊಂದಿದೆ. ಇದು ನೈಜ ಮೌಲ್ಯಗಳನ್ನು, ಮಾನವ ಸ್ವಾತಂತ್ರ್ಯವನ್ನು ಎತ್ತಿಹಿಡಿವ ಸಂಸ್ಕೃತಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಮ್ಮತ್ತೂರು ಬಸವರಾಜು ಅವರು ಪ್ರಾರ್ಥಿಸಿದರು. ಕಾರ್ಯಕ್ರಮವನ್ನು ಕುರಿತು ರಂಗವಾಹಿನಿಯ ಅಧ್ಯಕ್ಷರಾದ ಶ್ರೀ ಸಿ.ಎಂ. ನರಸಿಂಹಮೂರ್ತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಆರ್. ಉಮೇಶ್ ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಸಿ. ರೂಪಶ್ರೀ ಕಾರ್ಯಕ್ರಮವನ್ನು ನಿರೂಪಿಸಿದರು. ವಿವಿಧ ಸಂಸ್ಥೆಗಳ ಮುಖ್ಯಸ್ಥರುಗಳು, ಅಧ್ಯಕ್ಷರುಗಳು, ರಂಗಭೂಮಿ ಕಲಾವಿದರು, ನಗರದ ಗಣ್ಯ ವ್ಯಕ್ತಿಗಳು, ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

---

## ಗುರಿ ಇಲ್ಲದ ಬದುಕು ನಾವಿಕನಿಲ್ಲದ ದೋಣಿಯಂತೆ



ಜೀವನದಲ್ಲಿ ಯಶಸ್ಸು ಸಾಧಿಸಲು ಸತತ ಪರಿಶ್ರಮ, ತಾಳ್ಮೆ ಅವಶ್ಯಕ ಎಂದು ಮೈಸೂರಿನ ಎಂಐಟಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಚಂದ್ರಜಿತ್ ಮೋಹನ್ ರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ** ಗಣಕ ವಿಜ್ಞಾನ ಹಾಗೂ ಐಕ್ಯೂಎಸಿ ಸಹಯೋಗದ ವತಿಯಿಂದ ದಿನಾಂಕ 16.7.2025ರಂದು ಆಯೋಜಿಸಿದ್ದ ಪರಿಚಯಾತ್ಮಕ ಕಾರ್ಯಕ್ರಮದಲ್ಲಿ

ಕಲಿಕೆಯಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು ಸಶಕ್ತ ಕೌಶಲ, ಉದ್ದೇಶ ಮತ್ತು ಪ್ರೇರಣೆಯ ಜೀವನ ಪಾಠಗಳು ವಿಷಯ ಕುರಿತು ಮಾತನಾಡಿದರು. ನಮ್ಮ ಬೌದ್ಧಿಕ ಕ್ಷಮತೆ ಮತ್ತು ದೈಹಿಕ ಸಾಮರ್ಥ್ಯವನ್ನು ಮತ್ತೊಬ್ಬರಿಗೆ ಹೋಲಿಕೆ ಮಾಡಿಕೊಳ್ಳಬಾರದು. ನಮ್ಮ ಸಾಮರ್ಥ್ಯ ಹಾಗೂ ಅಭಿರುಚಿಗೆ ಅನುಗುಣವಾಗಿ ಕಲಿಕೆಯಲ್ಲಿ ತೊಡಗಿಸಿಕೊಂಡಾಗ ಯಶಸ್ಸು ಸಾಧ್ಯವಾಗುತ್ತದೆ. ಗುರಿ ಇಲ್ಲದ ಬದುಕು ನಾವಿಕನಿಲ್ಲದ ದೋಣಿಯಂತೆ ಸಾಧಕರ ಸಾಧನೆಗಳು ಪ್ರೇರಣೆಯಾಗಬೇಕೆ ಹೊರತು ಅನುಕರಣೆಯಾಗಬಾರದು. ಅವರಂತೆಯೇ ನಾವು ಆಗಬೇಕು ಎನ್ನುವುದು ಸರಿ, ಆದರೆ ಅದು ನಮ್ಮ ವ್ಯಕ್ತಿತ್ವ ಹಾಗೂ ಅಸ್ತಿತ್ವವನ್ನು ಅಳಿಸಬಾರದು. ನಮ್ಮ ಅತಿಯಾದ ನಿರೀಕ್ಷೆಗಳು ನಿರಾಸೆಗೆ ಕಾರಣವಾಗಬಹುದು. ಆಧುನಿಕ ಶಿಕ್ಷಣ ಪದ್ಧತಿಯೊಂದಿಗೆ ನಮ್ಮ ಪಾರಂಪರಿಕ ಜ್ಞಾನ ಅತ್ಯಮೂಲ್ಯವಾದುದ್ದು ಎಂದು ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ರೇಚಣ್ಣನವರು, ಗಣಕ ವಿಜ್ಞಾನ ವಿಭಾಗ ಮುಖ್ಯಸ್ಥರಾದ ಶ್ರೀ ಬಿ. ಧ್ರುವಕುಮಾರ್, ಐಕ್ಯುಎಸಿ ಸಂಯೋಜಕರಾದ ಶ್ರೀ ಹೆಚ್.ಜಿ. ಪ್ರದೀಪ್ ಉಪಸ್ಥಿತರಿದ್ದರು.

ಕು. ಕೀರ್ತನ ಮತ್ತು ಕು. ಮೇಘನಾ ಪ್ರಾರ್ಥಿಸಿದರು, ಶ್ರೀಮತಿ ಆರ್.ವಿ. ನಂದಿನಿ ಸ್ವಾಗತಿಸಿದರು. ಶ್ರೀಮತಿ ಹೆಚ್.ಯು. ಪ್ರೀತಿ ವಂದಿಸಿದರು. ಕು. ಪಿ.ಎಸ್. ಸಹನ ಕಾರ್ಯಕ್ರಮ ನಿರೂಪಿಸಿದರು.

---



ಸುತ್ತೂರು ಶ್ರೀಮಠದಲ್ಲಿ ಜರುಗಿದ 125ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಆರು ಜೋಡಿಗಳು ಸತಿಪತಿಗಳಾದರು. ಚಿತ್ರದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್‌ರವರು, ಶಿರಮಳ್ಳಿ, ಕಸುವಿನಹಳ್ಳಿ ಮಠಗಳ ಶ್ರೀಗಳು, ವಧೂ–ವರರ ಬಂಧುಗಳು ಹಾಗೂ ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರುಗಳಿದ್ದಾರೆ. (28 ಜುಲೈ 2025)

## ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ



**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ** ಮೊರಾರ್ಜಿ ದೇಸಾಯಿ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಯೋಗ ಮತ್ತು ನವದೆಹಲಿಯ ಆಯುಷ್ ಮಂತ್ರಾಲಯದ ಸಂಯುಕ್ತಾಶ್ರಯದಲ್ಲಿ ದಿನಾಂಕ 21.6.2025ರಂದು 11ನೇ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಗಣ್ಯರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ. ಜೆ. ಬೆಟಸೂರಮಠರವರು ಯೋಗದ ಮಹತ್ವ, ದೈನಂದಿನ ಅಭ್ಯಾಸದಿಂದಾಗುವ ಪ್ರಯೋಜನ, ಸಮಾಜದ ಆರೋಗ್ಯದಲ್ಲಿ ಯೋಗದ ಪಾತ್ರ, ವಿಶ್ವ ಯೋಗ ದಿನಾಚರಣೆ ನಡೆದು ಬಂದ ರೀತಿಯನ್ನು ತಿಳಿಸಿದರು. ಯೋಗಾಭ್ಯಾಸ ಕೇವಲ ದಿನಾಚರಣೆಗೆ ಸೀಮಿತವಾಗದೆ ದಿನನಿತ್ಯದ ಅಭ್ಯಾಸವಾಗಬೇಕೆಂದು ಹೇಳಿದರು.

ಮೈಸೂರಿನ ಯೋಗ ಪರಿಣಿತರು, ಪ್ರಣವ ಯೋಗಧಾಮದ ಶ್ರೀ ಜಯಕುಮಾರ ಸ್ವಾಮಿಜೀಯವರು ಹಲವು ದೇಶಗಳಲ್ಲಿ ತಾವು ನಡೆಸಿದ ಯೋಗ ಕಾರ್ಯಕ್ರಮಗಳ ಪರಿಚಯ ಹಾಗೂ ಸಮುದಾಯದ ಮೇಲೆ ಅವುಗಳಿಂದಾದ ಪ್ರಯೋಜನವನ್ನು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ, ಶ್ರೀ ಆರ್. ಮಹೇಶ್‌ರವರು "ಒಂದು ಭೂಮಿ, ಒಂದು ಆರೋಗ್ಯ" ಧ್ಯೇಯವಾಕ್ಯದಡಿ ನಡೆಯುತ್ತಿರುವ 11ನೇ ವಿಶ್ವ ಆರೋಗ್ಯ ದಿನಾಚರಣೆಯ ಸಂದರ್ಭದಲ್ಲಿ ಯೋಗಾಭ್ಯಾಸಗಳು ಪ್ರತಿ ಮನೆ ಪ್ರತಿ ಮನವನ್ನು ತಲುಪಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲರು ಹಾಗೂ ವೈದ್ಯಕೀಯ ಅಧೀಕ್ಷಕರಾದ ಡಾ. ಸರ್ಬೇಶ್ವರ್‌ಕರ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಶ್ರೀ ಮಹೇಂದ್ರ ಸಿಂಗ್ ಕಾಳಪ್ಪರವರು ಉಪಸ್ಥಿತರಿದ್ದರು. ಕು. ಅಶ್ಮಿತಾ ಹಾಗೂ ತಂಡದವರು ಪ್ರಾರ್ಥನೆಯನ್ನು ಮಾಡಿದರು. ಡಾ. ಶಿವಪ್ರಸಾದ್ ಹುಡೇದರವರು ಸ್ವಾಗತಿಸಿದರು. ಡಾ. ಪಿ. ಸುಧಾಕರ್ ರೆಡ್ಡಿಯವರು ವಂದಿಸಿದರು. ಡಾ. ಬಿ.ಜಿ. ಮಧುಸೂದನ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

## ಬೆಳ್ಳಿ ಬೆಡಗು

## ಜಗದ್ಗುರು ಶ್ರೀ ಶಿವರಾತ್ರೀಶ್ವರ ವೈದ್ಯಕೀಯ ಮಹಾವಿದ್ಯಾಲಯ ಬಾಲಕಿಯರ ವಿದ್ಯಾರ್ಥಿ ನಿಲಯ ಶ್ರೀ ಶಿವರಾತ್ರೀಶ್ವರ ನಗರ ಮೈಸೂರು



**ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ** ವಿವಿಧ ಸ್ಥಳಗಳಿಂದ ಅಧ್ಯಯನಕ್ಕಾಗಿ ಬರುವ ವಿದ್ಯಾರ್ಥಿನಿಯರಿಗೆ ಅಗತ್ಯ ವಸತಿ ಸೌಲಭ್ಯ ಕಲ್ಪಿಸುವ ಉದ್ದೇಶದೊಂದಿಗೆ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 25.3.1985ರಲ್ಲಿ ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು.

ಪ್ರಾರಂಭದಲ್ಲಿ ಎ,ಬಿ ಮತ್ತು ಮೆಸ್ ಬ್ಲಾಕ್ ಗಳನ್ನು ಮಾತ್ರ ನಿರ್ಮಿಸಲಾಗಿತ್ತು. ಎ ಬ್ಲಾಕ್ ನ 72 ಕೊಠಡಿಗಳಲ್ಲಿ 151 ಬಾಲಕರಿಗೆ ಹಾಗೂ ಬಿ ಬ್ಲಾಕ್ ನ 72 ಕೊಠಡಿಗಳಲ್ಲಿ 151 ಬಾಲಕಿಯರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿತ್ತು. ಮೆಸ್ ಬ್ಲಾಕ್ ನ ನೆಲಮಡಿಯಲ್ಲಿ ಅಡುಗೆಮನೆ, ಉಪಹಾರ ಕೊಠಡಿ, ಉಗ್ರಾಣ, ತರಕಾರಿ ಶೇಖರಣಾ ಕೊಠಡಿ ಮತ್ತಿತರ ಪೂರಕ ವ್ಯವಸ್ಥೆಯಲ್ಲದೆ ಕಟ್ಟಡದ ಮೊದಲನೇ ಮಹಡಿಯಲ್ಲಿ 46 ವಿದ್ಯಾರ್ಥಿನಿಯರು ಉಪಯೋಗಿಸಬಹುದಾದ 16 ಕೊಠಡಿಗಳ ವ್ಯವಸ್ಥೆಯು ಇದೆ. 2024ರಲ್ಲಿ ಎ ಬ್ಲಾಕ್ ಅನ್ನು ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ನವೀಕರಣಗೊಳಿಸಲಾಯಿತು. ಅಲ್ಲದೆ ಬಯೋ ಗ್ಯಾಸನ್ನು ಹೊರಭಾಗದಲ್ಲಿ ಪ್ರಾರಂಭಿಸಲಾಗಿದೆ. ಬಿ ಬ್ಲಾಕ್ ಅನ್ನು ನವೀಕರಿಸುವ ಯೋಜನೆ ಸಿದ್ಧವಾಗಿದೆ.

ವಸತಿ ನಿಲಯದಲ್ಲಿ ವಾಸಿಸುವ ಬಾಲಕರ ಸಂಖ್ಯೆ ಹೆಚ್ಚಾದ ಕಾರಣ 1991ರಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಪ್ರತ್ಯೇಕವಾಗಿ ಬಾಲಕರ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಯಿತು.

ಅಂತೆಯೇ ಬಾಲಕಿಯರ ದಾಖಲಾತಿ ಹೆಚ್ಚಾದುದರಿಂದಾಗಿ 2007ರಲ್ಲಿ ಸಿ ಬ್ಲಾಕ್ ಅನ್ನು ನಾಲ್ಕು ಅಂತಸ್ತುಗಳ ಕಟ್ಟಡವಾಗಿ ಮಾರ್ಪಡಿಸುವ ಮೂಲಕ 160 ವಿದ್ಯಾರ್ಥಿನಿಯರಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಯಿತು.

ಈ ಕಟ್ಟಡದಲ್ಲಿ ಈಗ ಜಿಮ್ ಸೌಲಭ್ಯವು ಇದೆ.

ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಳವಾದ ಕಾರಣ ನಾಲ್ಕು ಅಂತಸ್ತುಗಳುಳ್ಳ ಡಿ ಬ್ಲಾಕ್ ಅನ್ನು ನಿರ್ಮಿಸಲಾಯಿತು. ಈ ಕಟ್ಟಡದಲ್ಲೂ ಅಡುಗೆ ಮನೆ, ಉಪಹಾರ ಕೊಠಡಿ, ಉಗ್ರಾಣ ಹಾಗೂ ತರಕಾರಿ ಶೇಖರಣಾ ಕೊಠಡಿಗಳನ್ನು ನೆಲಮಹಡಿಯಲ್ಲೇ ನಿರ್ಮಿಸಲಾಗಿದೆ. 2018 ರಲ್ಲಿ ಕಟ್ಟಡವನ್ನು ಎಂಟು ಅಂತಸ್ತುಗಳಿಗೆ ವಿಸ್ತಾರಗೊಳಿಸುವುದರೊಂದಿಗೆ ಕೊಠಡಿಗಳ ಸಂಖ್ಯೆಯನ್ನು 282 ಕ್ಕೆ ಹೆಚ್ಚಿಸಲಾಯಿತು. ಇದೀಗ ಈ ನಿಲಯದಲ್ಲಿ 438 ವಿದ್ಯಾರ್ಥಿನಿಯರಿಗೆ ವಸತಿ ವ್ಯವಸ್ಥೆ ಒದಗಿಸಲಾಗುತ್ತಿದೆ. ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಕಟ್ಟಡದ ಮುಂಭಾಗ ಮತ್ತು ಹಿಂಭಾಗದಲ್ಲಿ ಲಿಫ್ಟ್‌ಗಳನ್ನು ಅಳವಡಿಸಲಾಗಿದೆ. ಈ ಕಟ್ಟಡದಲ್ಲಿ ಎಂಬಿಬಿಎಸ್, ಬಿಡಿಎಸ್, ಎಂಡಿಎಸ್ ಹಾಗೂ ಎಂಡಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರಿಗೆ ಅವಶ್ಯಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಕ್ಲಿನಿಕಲ್ ಪಿಜಿ ಮತ್ತು ಹೌಸ್ ಸರ್ಜನ್‌ಗಳ ತರಗತಿಗಳು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಡೆಯುವುದರಿಂದ ಇವರ ಅನುಕೂಲಕ್ಕಾಗಿ ಆಸ್ಪತ್ರೆ ಆವರಣದಲ್ಲಿ ಪಿಜಿ ರೆಸಿಡೆಂಟ್ ವಿದ್ಯಾರ್ಥಿ ನಿಲಯವನ್ನು 2014ರಲ್ಲಿ ಪ್ರಾರಂಭಿಸಲಾಯಿತು. ಇತ್ತೀಚೆಗೆ 2025ರಲ್ಲಿ ಕಟ್ಟಡವನ್ನು ನವೀಕರಿಸಲಾಗಿದೆ.

ಮೂರು ಅಂತಸ್ತಿನ 96 ಕೊಠಡಿಗಳ ಸ್ನಾತಕೋತ್ತರ ವಸತಿ ವಿದ್ಯಾರ್ಥಿ ನಿಲಯದಲ್ಲಿ ಬಾಲಕ ಬಾಲಕಿಯರಿಗೆ ಪ್ರತ್ಯೇಕ ಅಂತಸ್ತಿನಲ್ಲಿ ವಸತಿಯನ್ನು ಕಲ್ಪಿಸಲಾಗಿದೆ.

ಒಟ್ಟಿನಲ್ಲಿ ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಆಗಿಂದಾಗ್ಗೆ ನವೀಕರಣ ಗೊಳ್ಳುತ್ತಿರುವ ಜೆಎಸ್‌ಎಸ್ ವಿದ್ಯಾರ್ಥಿನಿಲಯಗಳಲ್ಲಿ ಆಧುನಿಕ ಸೌಲಭ್ಯಗಳಾದ ವೈಫೈ, ವಾಷಿಂಗ್ ಮಿಷಿನ್, ಸಿಸಿ ಕ್ಯಾಮೆರಾ, ಆರ್ ಓ ವಾಟರ್, ಹಾಟ್ ವಾಟರ್, ಎಸಿ ಇವೇ ಮೊದಲಾದ ಸಕಲ ಸೌಲಭ್ಯಗಳನ್ನು ಜೆಎಸ್‌ಎಸ್ ಮಹಾವಿದ್ಯಾಪೀಠ ಒದಗಿಸಿದೆ.

## ಗುಜರಾತ್ ಕರಕುಶಲ ಉತ್ಸವ–2025




ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗುಜರಾತ್ ರಾಜ್ಯದ ಇಂಡೆಕ್ಸ್ಟ್–ಸಿ ಸಂಸ್ಥೆಯವರ ಪ್ರಾಯೋಜಕತ್ವದಲ್ಲಿ ನೇರವೇರಿದ 'ಗುಜರಾತ್ ಕರಕುಶಲ ಉತ್ಸವ–2025' ಅನ್ನು ದಿನಾಂಕ 20.6.2025ರಂದು ಇಂಡೆಕ್ಸ್ಟ್–ಸಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಸಂಜಯ್ ಜೋಷಿ ಉದ್ಘಾಟಿಸಿದರು. ಶ್ರೀ. ಎಸ್ ವಿನೋದ್ ಕುಮಾರ್, ಡಾ. ಸ್ನೇಹಲ್ ಮಕ್ವಾನಾ, ಶ್ರೀಮತಿ ಸಾಬೀರ ಹಾಗೂ ಇತರರು ಭಾಗವಹಿಸಿದ್ದರು.

ಮೇಳದಲ್ಲಿ ಗುಜರಾತ್ ರಾಜ್ಯದ ಸುಮಾರು 75ಕ್ಕೂ ಹೆಚ್ಚು ಕರಕುಶಲಕರ್ಮಿಗಳು ಮತ್ತು ಕೈಮಗ್ಗ ನೇಕಾರರು ಭಾಗವಹಿಸಿದ್ದರು.

## Doctors' Day Celebrated



**JSS Ayurveda Medical College, Mysuru** observed Doctors' Day on 15.7.2025 in the presence of guests, faculty and PG students.

The Chief Guest on the occasion, Sri R. Mahesh, Director, Medical Education Division, JSS Mahavidyapeetha, shared his thoughts. He spoke on the importance of compassion in doctors and how that would help building a fruitful career.

As per the tradition of the Institution, an eminent medical practitioner, Dr. Basavaraj G. Saraganachari, Medical Superintendent, SDM Institute of Ayurveda, Bengaluru was felicitated. He shared the significance of the medical profession and remembered his teachers as the inspiration behind his clinical journey. He also paid rich tributes to Dr. B.C. Roy, in whose memory Doctors' Day was being celebrated.

The presidential address was delivered by Dr. Sarbeshwar Kar, Principal and Medical Superintendent of the College. He congratulated the guest and also shared his experience of working with him. He shared his thoughts about the duties of a doctor and the nobility of the profession.

## Induction Programme Conducted

The Induction Programme for the 1st year students of **JSS Polytechnic for the Differently Abled, Mysuru**, was held from 3rd - 15th July 2025, marking the beginning of the academic year 2025-26. This programme was designed to welcome and orient the new students to the academic environment, campus facilities, institutional culture, and student support systems.

The formal inauguration took place on 3.7.2025, with Sri Shankar Gowda Patil, District Disabled Welfare Officer, and Sri Jayaram, President of Sakshama Mysuru Unit, as the Chief Guests. The event was presided over by Sri B. Elangovan, Principal.

Throughout the event, a series of structured and informative sessions were organized. That included orientation on the Training & Placement Cell activities, NSS programmes, Sign Language Awareness, and more. Guest lectures were delivered by eminent speakers from various NGOs such as Enable India, Cheshire Disability Trust, EQUIEEING and Love India Regional Institute, Bengaluru, who inspired the newcomers with their insights on empowerment, accessibility, and inclusive development.

Students were also briefed on Youth Red Cross activities, sports and cultural programmes. Sessions also covered vital topics such as alumni engagement, IIPC and ISTE, library and information services, National Career Service (NCS) orientation and registration, hostel rules, examination regulations, scholarships, psychological counselling and healthcare facilities.

Dialy sessions included academic briefings and interactive elements such as talent hunts, campus tours and motivational talks, ensuring the students gained both information and confidence.

The valedictory ceremony, held on 15.7.2025, was graced by Sri Y.V. Raghunatha Gowda, Head Master, Sai Ranga Residential Deaf School, Mysuru, as the Chief Guest, and Lion Sri S. Murthy, Chairman of the Deaf Association and Vice-President of the Karnataka State Chess Association, as the Guest of Honour, with Sri B. Elangovan, who presided over the event.

The Induction Report was formally presented by Sri K. Kushal, Lecturer and Placement Officer, who also welcomed the gathering. Vote of Thanks was delivered by Ms. Harshitha, Lecturer in ADFT, while Dr. Palaniswamy served as the Master of Ceremony.

## Memorandum of Agreement



**JSS Dental College and Hospital, Mysore** signed a Memorandum of Agreement with VitalView AI Private Ltd, Thiruvananthapuram, a leading provider of AI-driven healthcare solutions in Kerala, on 22.7.2025, for academic, clinical and research collaboration


This collaboration aimed at fostering joint initiatives in prototyping, clinical validation, integration trials and access to clinical data and samples, based on mutual understanding and shared goals.

The event was presided over by Dr. H. Basavanagowdappa, Vice-Chancellor, JSS AHER, who addressed the gathering and shared his perspective on the growing importance of collaborative academic and research initiatives. The MoA was formally signed by Dr. M.R. Dhakshaini, Principal, JSS Dental College and Sri Amal Shehu, Founder & CEO, on behalf of VitalView AI.

□

## Institutional Achievements

In a moment of pride for the **JSS Academy of Higher Education & Research, Mysuru,** the Comprehensive Training in Implant Dentistry (CTID) program conducted by JSS Dental College and Hospital has been




Dr. S. Ganesh and Dr. S. Shyam Sundar receiving the award


honoured with the "Educational Partner of the Year - 2024" award by Straumann Dental India LLP at the prestigious INNOVATE 360 International Conclave held on 12th & 13th July 2025 at New Delhi.

The award was presented in recognition of exceptional skill, innovation, and training in dental implantology, positioning JSS Dental College & Hospital as one of the top three institutions selected nationwide. The award was received on behalf of the institution by Dr. S. Shyam Sundar and Dr. S. Ganesh, course co-ordinators of the CTID program.

## JSS Institute of Naturopathy & Yogic Sciences and Hospital, Coimbatore

**JSS Institute of Naturopathy & Yogic Sciences and Hospital, Coimbatore,** organized a Continuing Medical Education (CME) programme on 26.7.2025 on the theme "Healthy Lifestyle". The session was part of an ongoing effort to promote integrative healthcare and to enhance awareness on preventive strategies among healthcare professionals, students and faculty.

The keynote speaker for the event was Dr. Murali Krishnan, a distinguished Ayurvedic Doctor and renowned Health Education Advocate He was instrumental in implementing educational and healthcare initiatives in tribal communities. He has been leading Arogya Bharathi at the national level as well, since 2013.




Dr. Krishnan delivered an insightful address, highlighting the critical importance of health awareness, routine regulation, and conscious lifestyle choices. His talk emphasized how preventive care, supported by holistic practices, can significantly improve health scenario and reduce disease-burden on the society.

An engaging interactive session followed, where the participants sought practical guidance and also shared their experiences. The speaker responded with clarity and depth, offering useful insights into incorporating sustainable and health-promoting habits in their personal and professional life.

The CME programme inspired the participants to adopt and advocate for preventive health strategies rooted in traditional knowledge and supported by modern understanding. The event was co-ordinated by Dr. Sureshbabu.

***

**JSS Institute of Naturopathy and Yogic Sciences, Coimbatore** conducted a Community Health Outreach Programme on 19.7.2025, at the Roman Catholic Church, Chandrapuram, near Walayar. About 120 beneficiaries from the surrounding region attended the camp.

The initiative was aimed to promote holistic health through evidence-based naturopathic practices. The event was structured to deliver integrative wellness services while simultaneously raising awareness about lifestyle-related disorders and preventive healthcare.




The key highlights of the camp were:

i. Personalized Diet Consultations: Participants received individual dietary assessments and naturopathic recommendations tailored to their health profiles.

ii. Yoga Demonstrations: Practical demonstrations showcased the therapeutic application of yogic postures, breathing techniques, and relaxation methods for lifestyle management.

iii. Natural Diet Sampling: Attendees were provided with samples of a health-promoting natural diet, emphasizing the benefits of fresh, unprocessed and seasonal foods.

iv. Health Education Session: A structured health talk to enhance community awareness on lifestyle regulation, disease prevention, and the principles of holistic living.

In addition to the above activities, a Health Promotion Stall was set up, displaying and offering for sale a curated selection of therapeutic and wellness products that included Herbal teas, Eucalyptus oil, Raw honey, Kriya kits and Immunity enhancement kits.

The camp served as a vital step towards community-based health promotion. It effectively demonstrated the role of naturopathy and yoga in empowering individuals towards self-responsibility for health and well-being. The event was well-received by the local community and highlighted the importance of accessible and integrative healthcare in rural settings.

## Investiture Ceremony Held

### JSS Public School, Malur



A School Cabinet Council was formed at **JSS Public School, Malur** on 3.7.2025. Sri M.R. Ramesh, Fire Station Officer, Malur was the Chief Guest. The function was presided over by Smt. U. Remya, Principal. Master V. Hemdev of Grade X was elected as the Head Boy and Ms. S. Moulya Surag of Grade X was elected as Head Girl of the school. The chief guest Sri M.R. Ramesh presented the sashes for the elected leaders, which was indeed a proud moment to them. Smt. U. Remya, Principal administered the oath to the elected cabinet. The chief guest congratulated the leaders and delivered a motivational speech and advised the leaders to be a role model for others. The celebration was a grand success and concluded with the National Anthem.

### JSS Public School, Mandya

The Investiture Ceremony of **JSS Public School, Mandya** was celebrated on 12.7.2025 with zeal, enthusiasm. The ceremony is one of the momentous occasions when the school entrusts hope, faith and the mantle of responsibility to the newly appointed School Cabinet.

The ceremony signified the confidence that the school places in the newly appointed office-bearers. The student leaders took the ceremonial oath, pledging to uphold the values of integrity, discipline and setting the tone for their new roles.

The School Head Boy, Master Srujan of Class X, and Head Girl, Ms. Deepthi of Class X, along with the Deputy Head Boy, Deputy Head Girl, House Captains, Vice-Captains of Four




Houses, Club Captains, Sports Captain, and Discipline Captains were conferred with badges, sashes and flags corresponding to their roles.

The ceremony was graced by Sri Sunil, Sub-Inspector, Central Police Station, Mandya, and Smt. Nisha Manigandan, Principal. Sri Sunil spoke motivational words and guided the Student Council to be role models and take up their responsibilities sincerely as they are going to be the nation-builders of tomorrow. He advised the students to inculcate the values of punctuality, dedication, discipline and determination, as well. He called upon honesty, confidence, and clarity in thoughts and advised the new team to work not just for the betterment and growth of their fellow students but for their own personal growth as well.

The ceremony featured thoughtful address by school leaders, which highlighted what leadership means at the school. The function concluded with National Anthem.

## Various Forums Inaugurated

"Art and Culture are intertwined sice man is born on this planet. Man must strive to live in harmony with nature, embracing cultural values and fostering cordial relationship to lead a contented life" said Dr. S.M. Anushree, Assistant Administrative Officer, **JSS Dental College, Mysuru.**

Inaugurating the Cultural, Literary and Sports Forums at JSS Pre-University College for Women, Saraswathipuram, Mysuru, she emphasized that success can be achieved only through diligent study hard and work creative approach. She encouraged the students to adapt creative learning attitude and strive always for excellence.

Sri B.S. Prasanth, Managing Director,



Safe Wheels, Mysuru, the Chief Guest at the function, highlighted the importance of perseverance and said that failure is the stepping stone to success. He called upon the students to develop leadership qualities and become entrepreneurs.

Sri M.R. Kishore, Yoga Trainer, Department of Sports, University of Mysore, shared valuable insights with the students about maintaining physical fitness, and good health through proper diet and yoga practices.

Prof. Morabada Mallikarjuna, Director, College Education Division, JSS Mahavidyapeetha, in his presidential address, enlightened the students about the significance of culture, literature and sports activities. He added that life will be really beautiful when we develop co-operation and understanding with others.

Dr. Rechanna, Principal, JSS College for Women, Sri M. Shivakumarswamy, Physical Education Instructor, teaching and office staff and students took part in the function.

Sri M.S. Nataraju, Lecturer in Kannada, in his introductory speech, said that forgiveness is the most noble quality a person should possess. Citing the illustricious examples of Kannada legendary figures like Kuvempu and Dr. Rajkumar, he explained the role of literature and art in shaping an individual's personality.

The function began with an invocation by Ms. Sukanyashree. Ms. S. Manjula welcomed the dignitaries and the gathering. Smt. K.M. Shobha, Convenor, rendered the vote of thanks. Ms. B.S. Prakruthi compered the event.



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ಈಶಾ ಫೌಂಡೇಷನ್‌ನ ಸದ್ಗುರು ಶ್ರೀ ಜಗ್ಗಿ ವಾಸುದೇವ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಗೌರವಿಸಿದರು. (20 ಜುಲೈ 2025)



ಸುತ್ತೂರು ಶ್ರೀಮಠದಲ್ಲಿ ಜರುಗಿದ 126ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಏಳು ಜೋಡಿಗಳು ಸತಿಪತಿಗಳಾದರು. ಚಿತ್ರದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್‌ರವರು, ಶಿರಮಳ್ಳಿ ಮಠದ ಶ್ರೀಗಳು, ವಧೂ–ವರರ ಬಂಧುಗಳು ಹಾಗೂ ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರುಗಳಿದ್ದಾರೆ. (18 ಆಗಸ್ಟ್ 2025)



ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ವಸತಿ ಶಾಲೆ, ಶಾಲಾ ಶಿಕ್ಷಣ ಮತು ಸಾಕ್ಷರತಾ ಇಲಾಖೆ, ಭಾರತ ಸರ್ಕಾರ, ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದ್ದ ಸೀಡ್ ಬಾಲ್ ವಿತರಣಾ ಕಾರ್ಯಕ್ರಮವನ್ನು ಶಾಸಕರು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಸುಬ್ಬಣ್ಣ, ಶ್ರೀಮತಿ ಮಾಳವಿಕಾ ಅವಿನಾಶ್, ಡಾ. ಶೈಲೇಂದ್ರ ಬೆಲ್ದಾಳೆ, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಮತ್ತು ಶ್ರೀ ಟಿ.ಎಸ್. ಶ್ರೀವತ್ಸರವವರಿದ್ದಾರೆ. (18 ಜುಲೈ 2025)



ಗುಂಡ್ಲುಪೇಟೆಯ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಆಯೋಜಿಸಿದ್ದ 21ನೇ ಮದ್ಯವರ್ಜನ ಶಿಬಿರದ ಸಮಾರೋಪವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಎಸ್. ನಂಜಪ್ಪ, ಶ್ರೀ ಪಿ. ಕೃಷ್ಣಕುಮಾರ್, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಜಿ.ಎನ್. ಮಧುಸೂದನ್ ಹಾಗೂ ಸ್ವಯಂಸೇವಕರುಗಳೊಂದಿಗೆ ಶಿಬಿರಾರ್ಥಿಗಳಿದ್ದಾರೆ. (23 ಜುಲೈ 2025)



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಆಷಾಢ ಮಾಸದ ಕೊನೆಯ ಶುಕ್ರವಾರದಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರಸಾದ ವಿನಿಯೋಗ (ಅನ್ನದಾನ) ಕಾರ್ಯಕ್ರಮ ನೆರವೇರಿತು. ಶ್ರೀ ಎಸ್. ಶಿವಕುಮಾರಸ್ವಾಮಿ, ಡಾ. ಸಿ.ಜಿ. ಬೆಟಸೂರಮಠ ಹಾಗೂ ಶ್ರೀ ಎಸ್.ಪಿ. ಮಂಜುನಾಥ್‌ರವರುಗಳಿದ್ದಾರೆ. (18 ಜುಲೈ 2025)




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ 17ನೇ ಪದವೀಧರರ ದಿನಾಚರಣೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಪ್ರೊ. ಬಿ.ವಿ. ಸಾಂಬಶಿವಯ್ಯ, ಡಾ. ಎಂ. ಮುನಿಯಮ್ಮ, ಪ್ರೊ. ಎಲ್.ಎಸ್. ಶಶಿಧರ, ಡಾ. ಸಿ.ಜಿ. ಬೆಟಸೂರಮಠ, ಡಾ. ಎಂ. ಪ್ರಭು ಹಾಗೂ ಡಾ. ಬಿ. ಪ್ರಭುಸ್ವಾಮಿಯವರುಗಳೊಂದಿಗೆ ವಿವಿಧ ದತ್ತಿ ಪುರಸ್ಕಾರ ಪಡೆದ ಪದವೀಧರರುಗಳಿದ್ದಾರೆ. (12 ಆಗಸ್ಟ್ 2025)



ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಕೊನೆಯ ಆಷಾಢ ಮಾಸದ ಶುಕ್ರವಾರದಂದು ಶ್ರೀ ಚಾಮುಂಡೇಶ್ವರಿ ದೇವಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷಪೂಜೆ ಸಲ್ಲಿಸಲಾಯಿತು. ಚಿತ್ರದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರುಗಳಿದ್ದಾರೆ. (18 ಜುಲೈ 2025)




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಜರುಗಿದ ಗುರುಪೂರ್ಣಿಮೆ ಹಾಗೂ 281ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜರವರು ಗಾಯನ ಪ್ರಸ್ತುತಿ ಪಡಿಸಿದರು. ಮೃದಂಗದಲ್ಲಿ ವಿದ್ವಾನ್ ಅನಿರುದ್ಧ ಎಸ್. ಭಟ್, ಘಟಂನಲ್ಲಿ ವಿದ್ವಾನ್ ಎಂ.ಆರ್. ಮಂಜುನಾಥ್‌ರವರು ಮತ್ತು ವಯೊಲಿನ್‌ನಲ್ಲಿ ವಿದ್ವಾನ್ ಎಸ್. ಜನಾರ್ದನ್‌ರವರುಗಳು ಪಕ್ಕವಾದ್ಯ ಸಹಕಾರ ನೀಡಿದರು. (10 ಜುಲೈ 2025)

## ಗಣ್ಯ ಮಹನೀಯರೊಂದಿಗೆ ಪರಮಪೂಜ್ಯ ರಾಜೇಂದ್ರ ಶ್ರೀಗಳು



ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು



ವರನಟ ಡಾ. ರಾಜ್‌ಕುಮಾರ್ ಮತ್ತು ಶ್ರೀಮತಿ ಪಾರ್ವತಮ್ಮನವರು



ವಿಜ್ಞಾನಿ ಡಾ. ರಾಜಾ ರಾಮಣ್ಣನವರು



ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರು

Registered with the Registrar of Newspapers for India No. KARBIL/2014/66470
'JSS Varthapathra' Monthly, Vol. 10, Issue No. 8, August 2025

# ರಾಷ್ಟ್ರಪತಿ, ಉಪರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳೊಂದಿಗೆ ಪರಮಪೂಜ್ಯ ರಾಜೇಂದ್ರ ಶ್ರೀಗಳು




ರಾಷ್ಟ್ರಪತಿ ಡಾ. ಗ್ಯಾನಿ ಜೈಲ್ ಸಿಂಗ್‌ರವರು



ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರು



ಉಪರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್
ಮತ್ತು ಮಂತ್ರಮಹರ್ಷಿಗಳು



ಶ್ರೀ ಎಚ್.ಸಿ. ತುಳಸಿದಾಸಪ್ಪ ಹಾಗೂ
ಪ್ರಧಾನಿ ಶ್ರೀ ಗುಲ್ಜಾರಿಲಾಲ್ ನಂದಾರವರು

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821–2548212 Extn. 223 * e-mail: varthapathra@jssonline.org * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು **ಬಿಡಿ ಪ್ರತಿ 10 ರೂ.**